
ನಮ್ಮ ಮಾನಸ

ಸಂಪುಟ : 2 ಡಿಸೆಂಬರ್ 2008 ಸಂಚಿಕೆ : 8



ನಮ್ಮ ಮಾನಸ

ಡಿಸೆಂಬರ್ 2008

ಸಂಪುಟ : 2 ಸಂಚಿಕೆ : 8

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road,
Raghavanagara
New Timberyard Layout
Bangalore - 560 026.
✆ : 26757159

ಪರಿವಿಡಿ

ಚಂದಾ ವಿವರ

ಬಿಡಿಪ್ರತಿ	8–00 ರೂ.
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	100–00 ರೂ.
ಸಂಸ್ಥೆಗಳಿಗೆ	150–00 ರೂ.

ಓದುಗರ ಗಮನಕ್ಕೆ

ಓದುಗರೆಲ್ಲರ ಸಹಕಾರ ಹಾಗೂ ಪ್ರೋತ್ಸಾಹದಿಂದ 'ನಮ್ಮ ಮಾನಸ'ದ ಪ್ರಕಟಣೆ ಸಾಧ್ಯವಾಗಿದೆ. ಪತ್ರಿಕೆಗೆ ಓದುಗರ ಚಂದಾ ಹಣವೇ ಜೀವಾಳ. ಚಂದಾಹಣ ಕಳುಹಿಸಿ ಮತ್ತು ಚಂದಾ ನವೀಕರಿಸಬೇಕಾದವರು ನವೀಕರಿಸಿ ಪತ್ರಿಕೆಯನ್ನು ಆರ್ಥಿಕವಾಗಿ ಸದೃಢಗೊಳಿಸಬೇಕೆಂದು ವಿನಮ್ರವಾಗಿ ಕೋರುತ್ತೇವೆ.

ವಾರ್ಷಿಕ ಚಂದಾ – ರೂ. 100/–

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ, ವಿಜಯನಗರ
ಮೈಸೂರು – 570 017

ಸಂಪಾದಕೀಯ

ಬದಲಾಗುತ್ತಿರುವ ಆರ್ಥಿಕ ಸಂಗತಿ; ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯ

ಮಹಿಳಾ ಚಳವಳಿಯ ದಶಕದ ಹೋರಾಟದ ಫಲವಾಗಿ ಕೌಟುಂಬಿಕ ದೌರ್ಜನ್ಯ ವಿರೋಧಿ ಕಾನೂನು ನಮ್ಮ ಮುಂದಿದೆ. ಕುಟುಂಬದ ನಾಲ್ಕು ಗೋಡೆಯ ಒಳಗೆ ಮಹಿಳೆಯ ಮೇಲೆ ನಡೆಯುತ್ತಿರುವ ಅಮಾನುಷ ಹಿಂಸೆಯನ್ನು ಸಾರ್ವಜನಿಕಗೊಳಿಸಿ, ಅದನ್ನು ಕಾನೂನಿನ ಚೌಕಟ್ಟಿನೊಳಗೆ ಪುರಾವೆಗಳ ಸಹಿತ ಸಾಬೀತುಗೊಳಿಸುವುದು ಅತ್ಯಂತ ಕ್ಲಿಷ್ಟಕರವಾದ ಸಂಗತಿಯಾಗಿತ್ತು. ವರದಕ್ಷಿಣೆ, ಆಸ್ತಿ, ಹೆಣ್ಣುಮಗು ಜನಿಸಿರುವ – ಹೀಗೆ ಹಲವಾರು ಕಾರಣಕ್ಕೆ ದೈಹಿಕ ಹಾಗೂ ಮಾನಸಿಕ ನೆಲೆಯಲ್ಲಿ ಸಂಘಟಿತವಾಗಿ ಪ್ರತಿಭಟಿಸುವುದು ಸಹ ಕಷ್ಟಕರವಾದುದಾಗಿದೆ. ಕುಟುಂಬದೊಳಗಿನ ಹಾಗೂ ಸಮಾಜದಲ್ಲಿನ ಎಲ್ಲಾ ಮೌಲ್ಯಗಳು ಪುರುಷಪ್ರಧಾನ ಮೌಲ್ಯಗಳ ಕಪಿಮುಷ್ಠಿಯಲ್ಲಿರುವುದರಿಂದ, ಹಾಗೂ ಪುರುಷರ ಪಾತ್ರವೇ ನಿರ್ಣಾಯಕವಾದುದರಿಂದ ನೊಂದ ಮಹಿಳೆಯರಿಗೆ ಕನಿಷ್ಠ ಪ್ರಮಾಣದ ನ್ಯಾಯವನ್ನು ಪಡೆದಿರುವ ಮಹಿಳೆಯರ ಸಂಖ್ಯೆಯು ವಿರಳವೆಂದು ಹೇಳಬಹುದು.

ಮಹಿಳೆಯರ ಮೇಲೆ ನಡೆಯುತ್ತಿರುವ ವಿವಿಧ ರೀತಿಯ ಹಿಂಸೆ ಹಾಗೂ ದೌರ್ಜನ್ಯಕ್ಕೆ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಆಯಾಮವನ್ನು ಮಹಿಳಾ ಚಳವಳಿ ಗುರುತಿಸಿದೆ. ಮಹಿಳಾ ಸಮಸ್ಯೆಗಳ ಪರಿಹಾರವೂ ಸಹ ರಾಜಕೀಯ ಸ್ವರೂಪವನ್ನು ಹೊಂದಿರಬೇಕೆಂಬ ಅಗತ್ಯವನ್ನು ಚಳವಳಿ ಹೇಳುತ್ತಲೇ ಬಂದಿದೆ. ಮಹಿಳಾ ಸಂಘಟನೆಗಳ ಹೋರಾಟದ ಫಲವಾಗಿಯೇ ಕೌಟುಂಬಿಕ ದೌರ್ಜನ್ಯ ವಿರೋಧಿ ಕಾನೂನು ಅಕ್ಟೋಬರ್ 26, 2006ರಂದು ಜಾರಿಗೆ ಬಂದಿದೆ.

ಕಾನೂನನ್ನು ಕಾರ್ಯಗತಗೊಳಿಸುವುದು ಕಾನೂನನ್ನು ರಚಿಸುವುದರಷ್ಟೆ ಮುಖ್ಯವಾದುದು. ಕೌಟುಂಬಿಕ ದೌರ್ಜನ್ಯ ವಿರೋಧಿ ಕಾನೂನು ಜಾರಿಗೆ ಬಂದ ನಂತರ ಈ ಕಾನೂನನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಂತೆ ಮಹಿಳಾ ಸಂಘಟನೆಗಳು ಸರ್ಕಾರಗಳ ಮೇಲೆ ಒತ್ತಡವನ್ನು ಹೇರಿದ್ದವು. ಈ ಕಾನೂನನ್ನು ವಿವರವಾಗಿ ಚರ್ಚಿಸಿ, ವಿಶ್ಲೇಷಿಸಿ ತಮ್ಮ ಸಲಹೆಗಳ ವರದಿಗಳನ್ನು ಸಹ ನೀಡಿವೆ. ಕಾನೂನನ್ನು ವಿವಿಧ ಹಂತಗಳಲ್ಲಿ ಕಾರ್ಯಗತಗೊಳಿಸಲು ಅಗತ್ಯವಾದ ಕ್ರಮಗಳನ್ನು ವಿವಿಧ ರಾಜ್ಯ ಸರ್ಕಾರಗಳು ತೆಗೆದುಕೊಂಡಿವೆ. ರಕ್ಷಣಾ ಅಧಿಕಾರಿಗಳ ನೇಮಕ, ಸ್ವಯಂ ಸೇವಾ ಸಂಸ್ಥೆಗಳನ್ನು ಹಾಗೂ ಆಶ್ರಯತಾಣಗಳನ್ನು ಗುರುತಿಸುವುದು, ಇನ್ನೂ ಮುಂತಾದ ಕ್ರಮಗಳನ್ನು ಸರ್ಕಾರಗಳು ತೆಗೆದುಕೊಂಡಿವೆ.

ಈ ಕಾನೂನು ಜಾರಿಗೆ ಬಂದ ನಂತರ ದೇಶದಾದ್ಯಂತ ವಿವಿಧ ರಾಜ್ಯಗಳಲ್ಲಿ 2007ರ ವರದಿಯ ಪ್ರಕಾರ 7913 ಕೇಸುಗಳು ದಾಖಲಾಗಿವೆ. ರಾಜಾಸ್ತಾನದಲ್ಲಿ 3440, ಆಂಧ್ರಪ್ರದೇಶದಲ್ಲಿ 731, ಕರ್ನಾಟಕದಲ್ಲಿ 124, ದೆಹಲಿಯಲ್ಲಿ 607, ಗುಜರಾತ್‌ನಲ್ಲಿ 315 ಕೇಸುಗಳು ದಾಖಲಾಗಿವೆ. ವಿಧವೆಯರು ತಮ್ಮ ಆಸ್ತಿಯ ಹಕ್ಕಿಗಾಗಿ, ಮಕ್ಕಳ ಮೇಲಿನ ಹಕ್ಕಿಗಾಗಿ, ತಮ್ಮ ಮೇಲೆ ದೌರ್ಜನ್ಯದ ವಿರುದ್ಧ ಹೆಣ್ಣುಮಕ್ಕಳು, ತಮ್ಮ ಸಹೋದರರ ಮೇಲೆ ವಯಸ್ಸಾದ ತಾಯಂದಿರು ತಮ್ಮ ಗಂಡುಮಕ್ಕಳು ಹಾಗೂ ಸೊಸೆಯಂದಿರ ಮೇಲೆ ಕೇಸನ್ನು ದಾಖಲಿಸಿದ್ದಾರೆ.

ಈ ಕಾನೂನು ಯಶಸ್ವಿಯಾಗಿ ಕಾರ್ಯಗತವಾಗಬೇಕಾಗಿದ್ದರೆ ಮೊದಲು ಈ ಕಾನೂನಿನ ಬಗ್ಗೆ ಮಾಹಿತಿಯನ್ನು ಮಹಿಳೆಯರಿಗೆ ನೀಡಬೇಕಾಗುತ್ತದೆ. ನಗರ ಪ್ರದೇಶದ ವಿದ್ಯಾವಂತ ಮಹಿಳೆಯರಿಗೂ ಈ ಬಗ್ಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ. ಗ್ರಾಮೀಣ ಪ್ರದೇಶದ ಅನಕ್ಷರಸ್ಥ ಮಹಿಳೆಯರಿಗೂ ಈ ಸೌಲಭ್ಯ ದೊರೆಯಬೇಕೆಂದರೆ ಈ ಕಾನೂನಿನ ಬಗ್ಗೆ ಹೆಚ್ಚು ಪ್ರಚಾರವನ್ನು ನೀಡಬೇಕಾಗುತ್ತದೆ. ಹೆಚ್ಚು ಹೆಚ್ಚು ಕಾನೂನು ಶಿಬಿರಗಳನ್ನು ಗ್ರಾಮೀಣ ಮಟ್ಟದಿಂದ ಏರ್ಪಡಿಸುವುದು ಅತ್ಯಗತ್ಯವಾಗಿದೆ.

ಈ ಕಾನೂನನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಬೇಕಾಗಿರುವ ಆರ್ಥಿಕ ಸಂಪನ್ಮೂಲವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒದಗಿಸಬೇಕಾಗುತ್ತದೆ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳು ಈ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಹೆಚ್ಚು ಹಣವನ್ನು ಮೀಸಲಿಡಬೇಕಾಗುತ್ತದೆ. ಸರ್ಕಾರಗಳು ಬಜೆಟ್‌ಅನ್ನು ಮಂಡಿಸುವಾಗ ಮಹಿಳಾಪರವಾದ ದೃಷ್ಟಿಕೋನವನ್ನು

ಒಳಗೊಳ್ಳಬೇಕಾಗುತ್ತದೆ. ಇದು ಕೇಂದ್ರದ ಕಾನೂನಾಗಿರುವುದರಿಂದ, ಕೇಂದ್ರ ಸರ್ಕಾರ ಎಲ್ಲಾ ರಾಜ್ಯ ಸರ್ಕಾರಗಳಿಗೆ ಈ ನಿಟ್ಟಿನಲ್ಲಿ ಹೆಚ್ಚು ಪ್ರೋತ್ಸಾಹ ಹಾಗೂ ನೆರವನ್ನು ನೀಡಬೇಕಾಗುತ್ತದೆ.

ಸರ್ಕಾರಗಳು ರಕ್ಷಣಾ ಅಧಿಕಾರಿಗಳನ್ನು ಕಡ್ಡಾಯವಾಗಿ ನೇಮಕ ಮಾಡಬೇಕಾಗುತ್ತದೆ. ಸೂಕ್ತವಾದ ಅರ್ಹತೆಯುಳ್ಳ ಅಧಿಕಾರಿಗಳನ್ನು ನೇಮಿಸಿ ಅವರಿಗೆ 'ಕೌಟುಂಬಿಕ ದೌರ್ಜನ್ಯ ವಿರೋಧಿ ಕಾನೂನಿನ' ಬಗ್ಗೆ ತರಬೇತಿಯನ್ನು ನೀಡಬೇಕಾಗುತ್ತದೆ. ರಕ್ಷಣಾ ಅಧಿಕಾರಿಗಳು ಪೂರ್ಣಾವಧಿಯಲ್ಲಿ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತಿರಬೇಕು. ಪ್ರಸ್ತುತದಲ್ಲಿ ಇಲಾಖೆಗಳಲ್ಲಿ ಇತರೇ ಕೆಲಸಗಳನ್ನು ನಿರ್ವಹಿಸುವ ಅಧಿಕಾರಿಗಳಿಗೇ ಹೆಚ್ಚಿನ ಈ ಜವಾಬ್ದಾರಿಯನ್ನೂ ನೀಡಿರುವ ನಿದರ್ಶನಗಳು ಸಹ ಇವೆ. ಇಂತಹ ಸಂದರ್ಭದಲ್ಲಿ ಕೆಲಸದ ಒತ್ತಡದ ನಡುವೆ ಈ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ.

ರಕ್ಷಣಾಧಿಕಾರಿಗಳು ಮಹಿಳೆಯರ ಹಾಗೂ ನ್ಯಾಯಾಲಯದ ನಡುವೆ ಕೊಂಡಿಯಂತೆ ಕೆಲಸ ಮಾಡಬೇಕಾಗುತ್ತದೆ. ಮಹಿಳೆಯರಿಂದ ವಿವರವಾದ ಮಾಹಿತಿ ಸಂಗ್ರಹಿಸುವುದು, ಆಪ್ತಸಮಾಲೋಚನೆ ನಡೆಸುವುದು ಮತ್ತು ಇತರೇ ವಿವರಗಳನ್ನೂ ಸಂಗ್ರಹಿಸಿ ನ್ಯಾಯಾಲಯಕ್ಕೆ ವರದಿಯನ್ನು ನೀಡಬೇಕಾಗುತ್ತದೆ. ಹೀಗೆ ನೀಡುವ ವರದಿಗಳು ವಸ್ತುನಿಷ್ಠವಾಗಿರಬೇಕಾಗುತ್ತದೆ. ಗೌಪ್ಯತೆಯನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಅವರು ನೀಡುವ ವರದಿಯ ಆಧಾರದ ನ್ಯಾಯಾಲಯಗಳು ತೀರ್ಪನ್ನು ನೀಡಬೇಕಾಗಿರುವುದರಿಂದ, ವರದಿ ಸ್ಪಷ್ಟವಾದ ಮಾಹಿತಿಯನ್ನು ಒಳಗೊಂಡಿರಬೇಕಾಗಿರುತ್ತದೆ. ರಕ್ಷಣಾ ಅಧಿಕಾರಿಗಳು ನೀಡಿದ ಎಷ್ಟೋ ವರದಿಗಳಲ್ಲಿ ಅಸ್ಪಷ್ಟತೆ, ಗೊಂದಲ, ಅಪೂರ್ಣತೆಯಿಂದ ಕೂಡಿದ್ದ ಎಷ್ಟೋ ನಿದರ್ಶನಗಳು ಇವೆ. ಪೂರ್ಣಾವಧಿಯ ಅಧಿಕಾರಿ, ಅಗತ್ಯವಾದ ಸಿಬ್ಬಂದಿ ವರ್ಗ, ಕಛೇರಿ ಮುಂತಾದ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ಕಾನೂನು ನೆರವು ನೀಡುವ ವಿಭಾಗ, ಚಿಕಿತ್ಸೆ ನೀಡುವ ಆರೋಗ್ಯ ಇಲಾಖೆಯ ವಿಭಾಗ ಹಾಗೂ ಮಹಿಳೆಯರಿಗೆ ಆಶ್ರಯ ನೀಡುವ ಆಶ್ರಯತಾಣ, ಸ್ವಯಂ ಸೇವಾ ಸಂಸ್ಥೆಗಳು ಉತ್ತಮ ಸೇವೆ ನೀಡುವುದರ ಜೊತೆಗೆ, ಅವುಗಳ ನಡುವೆ ಪೂರಕವಾದ ಬಾಂಧವ್ಯವೂ ಸಹ ಇರಬೇಕಾಗುತ್ತದೆ.

ಕೌಟುಂಬಿಕ ದೌರ್ಜನ್ಯವನ್ನು ಕಾನೂನಿನ ಮೂಲಕ ವಿರೋಧಿಸುವ ಪ್ರಕ್ರಿಯೆಯಲ್ಲಿ ಬಹಳಷ್ಟು ಮಹಿಳೆಯರು ಅವರಿಗೆ ಸಂಬಂಧಪಟ್ಟ ಪುರುಷರ ಮೇಲೆ ದೂರು ನೀಡಿರುತ್ತಾರೆ. ಈ ಕಾನೂನು ಜಾರಿಗೆ ಬರುತ್ತಿದ್ದ ಹಾಗೆ, ವಿವಿಧ ರಾಜ್ಯಗಳಲ್ಲಿ ಪುರುಷರ ಸಂಘಟನೆಗಳು ಸ್ಥಾಪನೆಯಾಗಿವೆಯಲ್ಲದೆ, ಮಾಧ್ಯಮದ ಮೂಲಕ ಈ ಕಾನೂನು ಮಹಿಳೆಯರ ಮೂಲಕ ದುರಪಯೋಗವಾಗುತ್ತಿದೆಯೆಂಬ ಅತಿ ರಂಜಿತ ವರದಿಗಳು ಸಹ ಪ್ರಸಾರವಾದವು. "ಭಾರತೀಯ ಕುಟುಂಬವನ್ನು ರಕ್ಷಿಸಿ" ಎಂಬ ಪುರುಷರ ಕೂಗು ಸಹ ಅಲ್ಲಲ್ಲಿ ಕೇಳಿಬಂದಿದೆ.

ಭಾರತೀಯ ಕುಟುಂಬಗಳು ಮಹಿಳೆಯರ ಅಸಮಾನತೆ ಹಾಗೂ ತ್ಯಾಗದ ನೆಲಗಟ್ಟಿನ ಮೇಲೆ ನಿಂತಿವೆ. ಆಕೆಯ ಮೇಲೆ ಕ್ರೂರವಾದ, ಅಮಾನುಷವಾದ ಹಿಂಸೆ ಹಾಗೂ ಹಲ್ಲೆ ನಡೆಯುತ್ತಿದ್ದರೂ ಆಕೆ ಕುಟುಂಬದ ಮರ್ಯಾದೆ ಹಾಗೂ ಗೌರವವನ್ನು ಕಾಪಾಡುವ ಉದ್ದೇಶದಿಂದ ಸಹಿಸಿಕೊಳ್ಳುತ್ತಿದ್ದಾಳೆ. ಉಸಿರುಗಟ್ಟುವ ಈ ಹಿಂಸೆಯಿಂದ ಹೊರಬರಲಾರದೆ ಆತ್ಮಹತ್ಯೆಯ ದಾರಿ ಹಿಡಿಯುತ್ತಾಳೆ ಅಥವಾ ಅಮಾನುಷವಾದ ಕ್ರೌರ್ಯಕ್ಕೆ ಬಲಿಯಾಗುತ್ತಿದ್ದಾಳೆ. ಸಾಕ್ಷಿಗಳಿಲ್ಲದ ಆಕೆಯ ನೋವು ನಾಲ್ಕು ಗೋಡೆಯ ಕತ್ತಲಲ್ಲಿ ಹುದುಗಿ ಹೋಗುತ್ತಿದೆ.

ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯವನ್ನು ಕೇವಲ ಕಾನೂನಿನ ಮೂಲಕ ವಿರೋಧಿಸಲು ಸಾಧ್ಯವಿಲ್ಲ. ಮಹಿಳೆಯರ ಸಂವಿಧಾನದತ್ತ ಹಕ್ಕುಗಳನ್ನು ರಕ್ಷಿಸುವ ಹೊಸ ಹೊಸ ಕಾನೂನುಗಳು ಜಾರಿಗೆ ಬರುತ್ತಿರುವುದರ ಜೊತೆ ಜೊತೆಯಲ್ಲಿಯೇ ಬದಲಾಗುತ್ತಿರುವ ಆರ್ಥಿಕ ಹಾಗೂ ಸಾಮಾಜಿಕ ಹಿನ್ನೆಲೆಯಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯದ ಪ್ರಕರಣಗಳೂ ಹೆಚ್ಚುತ್ತಿರುವುದು ಆತಂಕಕಾರಿಯಾದ ಸಂಗತಿ. ಭಾರತೀಯ ಸಮಾಜದಲ್ಲಿ ಆಳವಾಗಿ ಬೇರೂರಿರುವ ಪಿತೃಪ್ರಧಾನ ಮೌಲ್ಯಗಳನ್ನು ಬೇರುಸಹಿತ ಕಿತ್ತೊಗೆಯುವವರೆಗೆ ಬದಲಾವಣೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ!

* * *

ನಮ್ಮ ಬಳಗದ ಪಿ.ಚಂದ್ರಿಕಾ ಅವರ 'ನನ್ನೊಳಗಿನ ಕಥೆಗಳು' ಕೃತಿಗೆ ಧಾರವಾಡ ವಿದ್ಯಾವರ್ಧಕ ಸಂಘವು ಧರ್ಮಸ್ಥಳ ಹೆಗಡೆ ಅವರ ತಾಯಿಯವರ ಹೆಸರಿನಲ್ಲಿ ನೀಡುವ 'ರತ್ನಮ್ಮ ಹೆಗಡೆ' ಪ್ರಶಸ್ತಿಯನ್ನು ಪಡೆದಿದ್ದಾರೆ. ಅವರಿಗೆ ಶುಭಾಶಯಗಳು. ಹೇಮಾಪಟ್ಟಣಶೆಟ್ಟಿ, ಪ್ರೀತಿ ಶುಭಚಂದ್ರ ಅವರೂ ಈ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಇವರಿಗೂ ನಮ್ಮ ಮಾನಸ ಬಳಗದ ಶುಭಾಶಯಗಳು.

❑

ವಿಮೋಚನೆ ಸ್ತ್ರೀಯರಿಗಿಂತ ಹೆಚ್ಚಾಗಿ ಪುರುಷರದೇ ಪ್ರಶ್ನೆ ಆಗಬೇಕಿದೆ

ಹಿಂದಿ ಮೂಲ : ***ಮನೂ ಭಂಡಾರಿ***
ಅನುವಾದ : ***ಬಿ.ಎನ್. ಸುಮಿತ್ರಾ ಬಾಯಿ***

ಮಹಿಳೆಯರ ಸಮಸ್ಯೆಗಳ ವಿಶ್ಲೇಷಣೆ, ಅವರ ಹಕ್ಕುಗಳು ಅಧಿಕಾರಗಳನ್ನು ಕುರಿತು ಸ್ತ್ರೀವಾದಿ ಚಳವಳಿಗಾರರು ಈವರೆಗೆ ಬಹಳಷ್ಟು ಚರ್ಚೆಮಾಡಿದ್ದಾರೆ. ಕಳೆದ 30 ವರ್ಷಗಳಿಂದ ಮಹಿಳೆಯರ ಸಮಸ್ಯೆಗಳ ವಿರುದ್ಧ ಹೋರಾಟಗಳು ನಡೆದಿದ್ದರೂ ಎಲ್ಲಾ ಮಹಿಳೆಯರನ್ನೊಳಗೊಂಡ ಸಾಮೂಹಿಕ ಸಂಘಟನೆಯೊಂದು ರೂಪುತಳೆಯುವುದು ಇದುವರೆಗೂ ಸಾಧ್ಯವಾಗಿಲ್ಲ. ಸಂಘಟನೆಯೇ ಯಾವುದೇ ಚಳವಳಿಯ ಮೂಲಶಕ್ತಿಯಾಗಿರುತ್ತದೆ.

ದೂರದೂರದ ಊರು, ಜಿಲ್ಲೆ, ಹಳ್ಳಿಗಳಲ್ಲಿ ವಿಭಿನ್ನ ಸಂಘಟನೆಗಳ ಪ್ರೇರಣೆ, ಪ್ರೋತ್ಸಾಹ, ಸಹಯೋಗಗಳಿಂದಾಗಿ ಅಲ್ಲಿಯ ಮಹಿಳೆಯರು ತಕ್ಕಮಟ್ಟಿಗೆ ತಮ್ಮ ಹಕ್ಕುಗಳು, ಅಧಿಕಾರಗಳ ಬಗ್ಗೆ ಜಾಗೃತರಾಗುತ್ತಿದ್ದಾರೆ, ಅವುಗಳನ್ನು ಪಡೆದುಕೊಳ್ಳಲು ಸಕ್ರಿಯವೂ ಆಗುತ್ತಿದ್ದಾರೆಂಬುದು ನಿಜ. ಆದರೂ ತಮ್ಮ ವಿಚಾರಗಳನ್ನು ಸಾಮೂಹಿಕವಾಗಿ ವ್ಯಕ್ತಪಡಿಸಬಲ್ಲ, ಸ್ತ್ರೀಯರ ಮೇಲಾಗುವ ಎಲ್ಲಾ ವಿಧವಾದ ಅನ್ಯಾಯಗಳ ವಿರುದ್ಧ ಒಗ್ಗೂಡಿ ಮುಂದಡಿಯಿಡಬಲ್ಲ ಯಾವುದೇ ಒಂದು ಖಚಿತವಾದ ವೇದಿಕೆ, ಸ್ಪಷ್ಟವಾದ ತಾತ್ತ್ವಿಕ ಕಾರ್ಯಕ್ರಮದ ಆಧಾರವಾಗಲಿ ಮಹಿಳೆಯರೆದುರು ಇಂದು ಇಲ್ಲ. ಮಹಿಳಾ ಚಳವಳಿ ಎಂಬ ಬೃಹತ್‌ಪ್ರಮಾಣದ ಸುಸಂಘಟಿತವಾದ ಒಂದು ಸ್ಪೇಸ್ ಅನ್ನು ಹೋರಾಟಗಾರರು ಕಂಡುಕೊಳ್ಳಲಾಗದೆ ಅಶಕ್ತರಾದಂತೆ ಏಕೆ ತೋರುತ್ತಾರೆ ಎಂಬುದನ್ನು ವಿಮರ್ಶಿಸಬೇಕಾದ್ದು ಇಂದು ಅವಶ್ಯಕವಾಗಿದೆ.

ಸ್ತ್ರೀವಾದಿ ಸಾಂಸ್ಕೃತಿಕ ಹೋರಾಟವು ನಿರಂತರವಾದ ಗತಿಶೀಲವಾದ ಪರಿವರ್ತನೆಯ ಪ್ರಕ್ರಿಯೆ ಆಗಿರುತ್ತದೆ. ಈಗ ಇಂಥ ಪರಿವರ್ತನೆಯ ಚಲನಶೀಲತೆ ಎಷ್ಟು ನಿಧಾನವಾಗಿದೆ ಎಂದರೆ ಸ್ತ್ರೀಯರ ಒಂದು ವರ್ಗವು (ಅವರ ಸಂಖ್ಯೆ ಅತ್ಯಲ್ಪವೇ ಇರಲಿ) ಪ್ರಗತಿಯ ಯಾವ ಎತ್ತರದ ಶಿಖರವನ್ನು ಇಂದು ತಲುಪಿದೆಯೋ ಅದನ್ನು ತಲುಪುವುದಕ್ಕೇ ಕಾಲು ಶತಮಾನ ಕಳೆದುಹೋಗಿದೆ. ಅಲ್ಲದೆ ದುರ್ಭಾಗ್ಯವಂತರಾದ ಬಹುಸಂಖ್ಯಾತರಾದ ಮಹಿಳೆಯರು ಇಂದಿಗೂ ಆ ಪ್ರಗತಿಯ ಶಿಖರದಿಂದ ಬಹುದೂರವೇ ಉಳಿದಿದ್ದಾರೆ. ಕಾಲದ ಬೆಳವಣಿಗೆಯೊಂದಿಗೆ ಆ ಚಲನೆಯು ಒಂದು ದಿಕ್ಕಿನತ್ತ ವೇಗವು ಹೆಚ್ಚಿದ್ದರೂ ಅಲ್ಲಿಗೇ ಅಂಟಿಕೊಂಡದ್ದರಿಂದ ಹೊರಗಿನ ಪ್ರಭಾವಗಳು ಆ ಪ್ರಗತಿಯ ಸ್ವರೂಪವನ್ನೇ ಬಹುಮಟ್ಟಿಗೆ ಬದಲಿಸಿಬಿಟ್ಟಿವೆ.

ಒಂದು ಆಂದೋಲನವು ಬಲವಾಗಿ ಬೆಳೆಯಬೇಕಿದ್ದರೆ ನಮ್ಮಲ್ಲಿ ನಮ್ಮದೇ ಆದ ಸ್ಪಷ್ಟವಾದ ಕಾರ್ಯಪ್ರಣಾಳಿಕೆಯೊಂದು ಇರಬೇಕು. ನಿರ್ದಿಷ್ಟವಾದ ಕ್ರಿಯಾಗತಿ, ಗುರಿಗಳ ಸ್ಪಷ್ಟ ರೂಪುರೇಷೆಗಳುಳ್ಳ ನಕಾಶೆ, ಅಥವಾ ಬ್ಲೂ ಪ್ರಿಂಟ್ ನಮ್ಮಲ್ಲಿ ಇರಬೇಕು. ನಮ್ಮ ಈ ವಿಶಾಲ ದೇಶದ ಮಹಿಳೆಯರಾದರೋ ಅನೇಕಾನೇಕ ವರ್ಗಗಳಲ್ಲಿ ವಿಭಿನ್ನ ಸ್ಥಿತಿಗತಿಗಳಲ್ಲಿ ಸೇರಿಹೋಗಿದ್ದಾರೆ. ಅವರೆಲ್ಲರನ್ನೂ ಸೇರಿಸಬಲ್ಲ ಸಮಾನವಾದ ಕಾರ್ಯಕ್ರಮವೊಂದನ್ನು ರೂಪಿಸುವುದು ಸಾಧ್ಯವೆ ಎಂಬುದೇ ಪ್ರಶ್ನೆ. ಆ ರೀತಿಯ ಕನಿಷ್ಠ ಸಾಮಾನ್ಯ ಕಾರ್ಯಕ್ರಮದ ಅಭಾವ ಇರುವವರೆಗೂ ಈಗಿರುವ ಸ್ಥಿತಿಯೇ ಮುಂದುವರೆಯುತ್ತಿರುತ್ತದೆ. ಬೇರೆ ಬೇರೆ ವರ್ಗಗಳ ಮಹಿಳೆಯರು ಅವರವರದೇ ರಾಜಕೀಯಾರ್ಥಿಕ ಸ್ಥಿತಿಗತಿಗಳಿಗೆ ಅನುಸಾರವಾಗಿ ತಮ್ಮ ತಮ್ಮದೇ ಪ್ರಗತಿಯ ಏಣಿಗಳನ್ನು ಸಿದ್ಧಪಡಿಸಿಕೊಂಡು ಸಾಗುತ್ತಿರುತ್ತಾರೆ ಅಷ್ಟೆ. ಹೀಗಿರುವುದರಿಂದ ಸ್ತ್ರೀವಾದಿ ಸಂಸ್ಕೃತಿ ವಿಮರ್ಶೆ ಎನ್ನುವುದು ಮಹಿಳಾ ಚಳವಳಿಯ ಹಾಗೂ ಸಾಮಾಜಿಕ ಪರಿವರ್ತನೆಯ ಮೂಲ ಸಾಧನವಾಗಿರದೆ ಕೇವಲ ಅಂಥ ಆಶಯ ಹೊಂದಿರುವ ವಿಚಾರಧಾರೆಯಷ್ಟೇ ಆಗಿ ಕಂಡುಬರುತ್ತಿದೆ.

ಬಹುಸಂಸ್ಕೃತಿಗಳ ನಾಡಾದ ಭಾರತದಲ್ಲಿ ಎಲ್ಲ ಸ್ತರದ ಮಹಿಳೆಯರಿಗೂ ಸಮಾನವಾಗಿ ಅನ್ವಯಿಸಬಹುದಾದ, ಎಲ್ಲರನ್ನೂ ಒಂದು ತಾತ್ತ್ವಿಕ ಚೌಕಟ್ಟಿನಡಿ ತಂದು ಒಂದು ತತ್ತ್ವ ಪ್ರಣಾಳಿಕೆಯ ಗಜಕಡ್ಡಿಯಿಂದ ಅಳೆಯುವುದು ಅಸಂಭವನೀಯ. "ಭಾರತೀಯ ಮಹಿಳೆ" ಎಂದು ಹೇಳಿದಾಗ ನಮ್ಮ ಕಣ್ಮುಂದೆ ಬರುವ ಸ್ತ್ರೀಯ ಚಿತ್ರ ಯಾವುದು? ಯಾವ ಮಹಿಳೆಯನ್ನು ನಾವು 'ಭಾರತೀಯ ಸ್ತ್ರೀ' ಎಂದು ಕರೆಯುತ್ತೇವೆ? (ಇಂಥ ಯಾವುದೇ ಒಂದು ಚಿತ್ರ ಎಲ್ಲರನ್ನೂ ಪ್ರತಿನಿಧಿಸಲಾರದು.)

ಮಹಾನಗರ, ದೊಡ್ಡನಗರಗಳಲ್ಲಿ ನೆಲೆಸಿರುವ ಶಿಕ್ಷಿತರಾದ, ಆರ್ಥಿಕವಾಗಿ ಸ್ವತಂತ್ರರಾದ, ಮಾತ್ರವಲ್ಲ, ವಿಭಿನ್ನ ಕ್ಷೇತ್ರಗಳ ಉನ್ನತ ಪದವಿಗಳಲ್ಲಿ ಕೆಲಸಮಾಡುವ, ಆಧುನಿಕ ಚೈತನ್ಯ ಸಂಪನ್ನರಾದ ಮಹಿಳೆಯರು ಪುರುಷರ ವರ್ಚಸ್ಸಿನ ಪ್ರಭಾವಳಿಯನ್ನು ಒತ್ತರಿಸಿ ತಮ್ಮ ಮೂಲಭೂತ ಹಕ್ಕು, ಅಧಿಕಾರಗಳ ಬಗ್ಗೆ ಎಚ್ಚರವಾಗಿದ್ದು ಅವನ್ನು ಪಡೆದುಕೊಳ್ಳಲು ಸದಾ ಸಕ್ರಿಯವಾಗಿ ತೊಡಗಿರುವವರೂ ಆಗಿರುತ್ತಾರೆ. ಇವರ ಸಂಖ್ಯೆ ಹೆಚ್ಚಿಲ್ಲದಿರಬಹುದು. ಆದರೆ ತಮ್ಮ ಪ್ರಭಾವಪೂರ್ಣ ಉಪಸ್ಥಿತಿಯನ್ನು ಸಮಾಜದಲ್ಲಿ ಸ್ಥಾಪಿಸಿ ಗೌರವಾರ್ಹ ಸ್ಥಾನ, ಪ್ರತಿಷ್ಠೆಗಳನ್ನು ಪಡೆದಿರುವವರು ಇವರು. ಇಂಥ ಮಹಿಳೆಯರು "ಭಾರತೀಯ ಸ್ತ್ರೀ" ಎಂದಾಗ ನಮ್ಮ ಮನದೆದುರು ಮೂಡಿಬರುತ್ತಾರೆಯೆ?

ಚಿಕ್ಕ ಚಿಕ್ಕ ನಗರ, ಜಿಲ್ಲೆ, ಪಟ್ಟಣ, ಹಳ್ಳಿಗಳಲ್ಲಿ ವಾಸಿಸುತ್ತಿದ್ದು ಶಿಕ್ಷಿತರಾದರೂ ಆರ್ಥಿಕ ಸ್ವಾತಂತ್ರ್ಯದತ್ತ ಸಂಖ್ಯಾದೃಷ್ಟಿಯಿಂದ ಬೆಳೆಯುತ್ತಲೂ ಇರುವ ಮಧ್ಯಮವರ್ಗೀಯ ಮಹಿಳೆಯರು ಬದುಕಿನ ಕ್ರಮದಲ್ಲಿ ಪರಂಪರಾಗತ ಸಂಪ್ರದಾಯಗಳ ಸಂಸ್ಕಾರಗಳಲ್ಲೇ ಬಂಧಿತರಾದವರು. ಪುರುಷರ ಮೇಲ್ಮೆಗೇ ಆತುಕೊಳ್ಳುತ್ತ, ತಮ್ಮ ಮೂಲಭೂತ ಅಧಿಕಾರಗಳಿಂದ ವಂಚಿತರಾದವರಿವರು. ಹಲವೊಮ್ಮೆ ಅಂಥ ಹಕ್ಕು ಅಧಿಕಾರಗಳ ಬಗ್ಗೆ ಎಚ್ಚರವನ್ನೂ ಹೊಂದಿರದೆ ತಾವಿರುವ ಸ್ಥಿತಿ ತಮ್ಮ ಕರ್ಮ/ಅದೃಷ್ಟ/ಪ್ರಾಪ್ತಿ ಎಂದು ಅದರಲ್ಲೇ ಸಂತುಷ್ಟರಾಗಿರುವ ಈ ಮಹಿಳೆಯರನ್ನು ನಾವು "ಭಾರತೀಯ ಸ್ತ್ರೀಯರು" ಎಂದಾಗ ಯೋಚಿಸುತ್ತೇವೆಯೆ?

ಕಳೆದ ಕೆಲವು ವರ್ಷಗಳಲ್ಲಿ ಈ ವರ್ಗದವರಲ್ಲೂ ಆಧುನಿಕ ಪ್ರಜ್ಞೆ, ಚೈತನ್ಯದ ಹೊಳಪು ಕಾಣಿಸತೊಡಗಿದೆ. ಆದರೆ ಅದರ ಪ್ರಗತಿ ತೀರಾ ನಿಧಾನವಾದದ್ದು. ಮೊದಲ ವರ್ಗಕ್ಕಿಂತ ಸಂಖ್ಯೆಯಲ್ಲಿ ಇವರ ವರ್ಗ ಸಾಕಷ್ಟು ದೊಡ್ಡದು. ಆದರೆ ಇವರಿಗಿಂತ ಕೆಳಗಿರುವ ಮೂರನೆಯ ಗುಂಪಿನ ಬಗ್ಗೆ ಯೋಚಿಸಬೇಕು.

ನಗರಗಳಲ್ಲೂ, ಜಿಲ್ಲೆ, ತಾಲ್ಲೂಕು, ಕಸಬಾ, ಗ್ರಾಮ–ಎಲ್ಲೆಲ್ಲೂ ಕೂಲಿಗಾರರಾಗಿ ಬಹುಶ್ರಮಭರಿತ ಜೀವನ ನಡೆಸುವ, ಕೆಳವರ್ಗದ ಅಶಿಕ್ಷಿತ ಮಹಿಳೆಯರಿವರು. ಆರ್ಥಿಕವಾಗಿ ತಮ್ಮ ಗಂಡಸರ ಸಮಾನವಾಗಿ ದುಡಿದು ಗಳಿಸಿದರೂ ಕುಟುಂಬಗಳ ರೋಗ, ರುಜಿನ, ಸಾವು ನೋವು, ಕುಡಿದುಬರುವ ಗಂಡಂದಿರ ಹೊಡೆತ ಬಡಿತಗಳನ್ನು ತಿನ್ನುತ್ತಾ ಬದುಕುವುದೇ ಇವರ ದಿನನಿತ್ಯದ ಬದುಕಿನ ದೊಡ್ಡ ಭಾಗವಾಗಿರುತ್ತದೆ. ಇಂತಹ ಆರ್ಥಿಕವಾಗಿ ಹಿಂದುಳಿದ, ದಯನೀಯ ಸ್ಥಿತಿಯಲ್ಲಿರುವ ಮಹಿಳೆಯರೇ ನಮ್ಮ ಸಮಾಜದಲ್ಲಿ ಬಹುಸಂಖ್ಯಾತರು.

ಈ ಮೂರು ವರ್ಗಗಳ ನಡುವೆ ಎಷ್ಟೋ ಲೆಕ್ಕವಿಲ್ಲದಷ್ಟು ಉಪವರ್ಗಗಳಲ್ಲಿ ಇರುವ ಮಹಿಳೆಯರ ಸ್ಥಿತಿಗತಿಗಳೂ ಭಿನ್ನಭಿನ್ನವಾಗಿರುತ್ತವೆ. ಇಂತಹ ಎಲ್ಲ ಸ್ತರಗಳು ಮಹಿಳೆಯರನ್ನು ಒಂದೇ ಚೌಕಟ್ಟಿನೊಳಗೆ ತರುವುದು ಇಂಡಿಯಾದಲ್ಲಷ್ಟೇ ಅಲ್ಲ, ಜಗತ್ತಿನ ಯಾವ ದೇಶದಲ್ಲೂ ಅಸಾಧ್ಯವಾದ ಮಾತೇ. ಆದರೆ ನಮ್ಮ ಈ ವಿಶಾಲ ಉಪಖಂಡದಲ್ಲಿ ಒಂದು ವರ್ಗಕ್ಕಿಂತ ಮತ್ತೊಂದು ಎಷ್ಟು ಭಿನ್ನವಿದೆಯೆಂದರೆ ಬಹುಶಃ ಬೇರೆಲ್ಲೂ ಇಷ್ಟೊಂದು ವಿಭಿನ್ನ ಮಾದರಿಗಳು ಕಾಣಸಿಗಲಾರವು. ಈ ಕಾರಣದಿಂದಾಗಿಯೇ ಯಾವುದೇ ಸಾಮಾನ್ಯ ತಾತ್ವಿಕ ಕಾರ್ಯಪ್ರಣಾಳಿಕೆಯುಳ್ಳ ನೀಲಿನಕಾಶೆಯನ್ನು ರೂಪಿಸುವುದಕ್ಕೆ ಸ್ತ್ರೀವಾದಿ ಹೋರಾಟಗಾರರಿಗೆ ಇಲ್ಲಿ ಸಾಧ್ಯವೂ ಆಗಲಾರದು.

ಸ್ತ್ರೀವಾದಿ ಚಳವಳಿಯ ಒಟ್ಟು ಜವಾಬ್ದಾರಿ, ಹಾಗೂ ಹೋರಾಟದ ಹೊಣೆಯ ಕೇಂದ್ರದಲ್ಲಿರುವವರು ಹೆಚ್ಚಾಗಿ ಮಧ್ಯಮವರ್ಗದ ಮಹಿಳೆಯರೇ. ಇದಕ್ಕೆ ಮುಖ್ಯ ಕಾರಣ ಶಿಕ್ಷಣ ಮತ್ತು ಅದಕ್ಕೆ ಹೊಂದಿಕೊಂಡಂತೆ ಬೆಳೆಸಿಕೊಂಡ ಆಧುನಿಕ ಪ್ರಜ್ಞೆ. ತನ್ನ ವ್ಯಕ್ತಿತ್ವ, ತನ್ನ ಅಸ್ಮಿತೆಯ ಅರಿವುಳ್ಳ ಮಹಿಳೆ ತನ್ನ ಸುತ್ತಲಿನ ಪರಿಸರಕ್ಕೂ ಮಹತ್ವದ ಕಾಣಿಕೆ ನೀಡಬಲ್ಲಳು. ನಾಲ್ಕುದಿಕ್ಕಿನ ಆಗುಹೋಗುಗಳನ್ನು ಕಂಡು, ಕೇಳಿ, ಅರ್ಥಮಾಡಿಕೊಳ್ಳುವುದರಿಂದ ಅವಳ ವೈಚಾರಿಕ ದೃಷ್ಟಿಕೋನ ಸಾಕಷ್ಟು ವಿಸ್ತಾರವೂ ಆಳವುಳ್ಳದ್ದೂ ಆಗಿರಬಲ್ಲದು. ಇಂತಹ ಅವಕಾಶದ ಸವಲತ್ತು ಕೂಡ ಮಹಾನಗರಗಳಲ್ಲಿ ಹಾಗೂ ದೊಡ್ಡ, ಚಿಕ್ಕ ನಗರಗಳ ಮಹಿಳೆಯರಿಗಷ್ಟೇ ಲಭ್ಯವಾಗಿರುತ್ತದೆ. ಹಳ್ಳಿಗಳಲ್ಲಿ, ಸಮಾಜದ ಅಂಚಿನಲ್ಲಿ ಬದುಕುವ ಬಹುಸಂಖ್ಯಾತ ಸ್ತ್ರೀಯರು ಇಬ್ಬದಿಗಳಿಂದಲೂ ಹೊಡೆತ ಭರಿಸುತ್ತಿರುತ್ತಾರೆ. ಹೆಣ್ಣಾಗಿರುವುದೇ ಒಂದು ದಿಕ್ಕಿನಿಂದ ಅಭಿಶಾಪವಾಗಿದ್ದರೆ, ಮತ್ತೊಂದೆಡೆ ಭಯಂಕರವಾದ ಬಡತನದ ಹೊಡೆತ, ಅವರ ಇಡೀ ಬದುಕಿನ ಹೋರಾಟ ಕೇವಲ ತಮ್ಮ ಅಸ್ತಿತ್ವ ಕಾಯ್ದುಕೊಳ್ಳುವುದಕ್ಕೇ ಇರುತ್ತದೆ. ಅಂಥವರ ದೃಷ್ಟಿಯಿಂದ ಸ್ತ್ರೀವಾದ ಹೇಳುವ ಪಿತೃಸಂಸ್ಕೃತಿಯಲ್ಲಿನ ಲಿಂಗತಾರತಮ್ಯದ ವಿಚಾರಗಳೆಲ್ಲ ಕೇವಲ ಬೌದ್ಧಿಕ ಲಕ್ಷುರಿಯಾಗಿರುತ್ತದೆ. ಆ ಬಗ್ಗೆ ಅವರಿಗೆ ಯಾವ ಅರಿವೂ ಇಲ್ಲ. ಸರ್ಕಾರ, ಸಂಸ್ಕೃತಿ, ಸಂಪ್ರದಾಯಗಳು ಹೇರಿರುವ ರೀತಿರಿವಾಜುಗಳು ಇವರಲ್ಲಿ ಎಷ್ಟು ಬಲವಾಗಿ ಬೇರುಬಿಟ್ಟಿವೆ ಎಂದರೆ ಅವೆಲ್ಲ ಅವರ ದೇಹದ ಮಾಂಸ-ಮಜ್ಜೆಗಳ ಹಾಗೆ ಬೆರೆತುಹೋಗಿವೆ. ಇನ್ನು ಪರಿವರ್ತನೆಯ ಮಾತೆಂಬುದೆಲ್ಲಿ ಬಂತು?

ನಡತೆಗೆಟ್ಟವರೆಂದು ಆಪಾದಿಸಿ, ಬೆತ್ತಲು ಮಾಡಿ ಊರಿಡೀ ಮೆರವಣಿಗೆ ಮಾಡುವ ಘೋರ ಅವಮಾನಕ್ಕೆ ಇಂಥ ಎಷ್ಟೋ ಸ್ತ್ರೀಯರು ನಿರಂತರ ಬಲಿಯಾಗುತ್ತಾರೆ. ಅವರ ಈ ಸ್ಥಿತಿಯನ್ನು ಬೇರೆ ಮಹಿಳೆಯರು ಬರೀ ಕುತೂಹಲದಿಂದ ನೋಡುತ್ತಿರುತ್ತಾರೆ. ತಮ್ಮಿಷ್ಟದಂತೆ ಮದುವೆಯಾದರೆಂಬ ಕಾರಣಕ್ಕಾಗಿ ಅದೆಷ್ಟೋ ಜೋಡಿಗಳನ್ನು ಸ್ವಲ್ಪವೂ ಮಮಕಾರವಿಲ್ಲದೆ ಕೊಂದು ಹಾಕಲಾಗುತ್ತದೆ. ಅವರ ಸಂಬಂಧಿಕರು ಆ ಬಗ್ಗೆ ನಿರ್ಲಿಪ್ತರಾಗಿರುತ್ತಾರೆ. ಈ ಬಗೆಯ ನಿದರ್ಶನಗಳಿಗೆ ಲೆಕ್ಕವಿಲ್ಲ. ಇಂತಹ ಸ್ಥಿತಿಯಲ್ಲಿ ಸ್ತ್ರೀವಾದಿ ಚಳವಳಿಯ ಒಂದನೆಯ ಮೆಟ್ಟಿಲಿಗೆ ಬರುವುದಕ್ಕೂ ಮೊದಲು ಈ ಮಹಿಳೆಯರು ಬೇರೆ ಬೇರೆ ಕ್ಷೇತ್ರಗಳ ಇನ್ನೂ ಎಷ್ಟೋ ಏಣಿಗಳನ್ನು ಏರುವುದು ಅಗತ್ಯವಿದೆ.

ಸ್ತ್ರೀಸಮುದಾಯಕ್ಕೆ ಹೋಲಿಸಿದಲ್ಲಿ ದಲಿತರು ರಾಜಕೀಯ ಕ್ಷೇತ್ರದಲ್ಲಿ ಬಹಳಷ್ಟು ಮುಂದೆ ಹೋಗಿದ್ದಾರೆ. ಹೀಗಾಗಲಿಕ್ಕೆ ಅವರಿಗೆ ಮೀಸಲಾತಿಯ ರಕ್ಷಣೆಯೇ ದೊಡ್ಡ ಕಾರಣವಲ್ಲವೆ? ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟುಗಳಿಗಾಗಿ ಕೆಲವು ಸೀಟುಗಳನ್ನು ಲೋಕಸಭೆಯಲ್ಲಿ ಮೀಸಲಿಟ್ಟಿರುವುದರಿಂದ ಆ ಸ್ಥಾನಗಳಿಗೆ ಬಂದು ಸೇರಿ ನಿಧಾನವಾಗಿ ರಾಜಕೀಯವಾಗಿ ತಮ್ಮ ಅಸ್ತಿತ್ವವನ್ನು ಅವರು ಬಲಪಡಿಸಿಕೊಂಡಿದ್ದಾರೆ. ಈ ಕಡೆ ಮಹಿಳೆಯರಿಗೆ 33% ಮೀಸಲಾತಿ ನೀಡಬೇಕೆಂಬ ಬಿಲ್ಲು ವರ್ಷಗಟ್ಟಲೆ ಕೊಳೆಯುತ್ತಾ ಬಿದ್ದಿದೆ. ಅಡ್ಡಿಗಳು ನಾನಾ ರೀತಿಯವೇ ಇರಬಹುದು. ಆದರೆ ಮೂಲ ಕಾರಣವು ಲೋಕಸಭೆಯೇ ನಮ್ಮ 'ಭಾಗ್ಯವಿಧಾತ'ನಾಗಿ ಕೂತುಬಿಟ್ಟಿರುವುದೇ ಅಲ್ಲವೆ? ಅಷ್ಟು ಮಟ್ಟಿನ ಅಧಿಕಾರವನ್ನು ಮಹಿಳೆಯರ ಕೈಗೆ ಒಪ್ಪಿಸಿಬಿಡುವ ಕಲ್ಪನೆ ಸಹ ನಮ್ಮ ಪುರುಷವರ್ಗಕ್ಕೆ ಸಹನೀಯವಾಗಿಲ್ಲ.

ಮನ್ನೂಭಂಡಾರಿ: ಹಿಂದಿ ಮತ್ತು ಉರ್ದು ಕಥಾಕ್ಷೇತ್ರದಲ್ಲಿ ಹೆಸರಾಂತ ಹಿರಿಯ ಲೇಖಕಿ. ಅವರು ಬರೆದಿರುವ "ಬಂಟಿ" ಎಂಬ ಕಾದಂಬರಿ ಸ್ವಾತಂತ್ರ್ಯೋತ್ತರ ಭಾರತದ ಒಂದು ಅಸಾಧಾರಣ ಕಲಾಕೃತಿ ಎಂದು ವಿಮರ್ಶಕರ ಪ್ರಶಂಸೆಗೆ ಪಾತ್ರವಾಗಿದೆ. ಕೃತಿಯು ಜನಪ್ರಿಯವಾಗಿದ್ದೂ ಕಲಾತ್ಮಕತೆಯಿಂದ ಶ್ರೇಷ್ಠವೆನಿಸಿದೆ.

ಮನ್ನೂಭಂಡಾರಿಯವರದೇ "ಯಹೀ ಸಚ್ ಹೈ" ಸಣ್ಣಕಥೆಯು "ರಜನೀ ಗಂಧಾ" ಎಂಬ ಸುಪ್ರಸಿದ್ಧ ರಾಷ್ಟ್ರಪ್ರಶಸ್ತಿ ವಿಜೇತ ಹಿಂದಿ ಚಿತ್ರವಾಯಿತು.

ಏಪ್ರಿಲ್ 3, 1931ರಲ್ಲಿ ಜನಿಸಿದ ಮನ್ನೂಭಂಡಾರಿ ಖಚಿತವಾದ ಸಾಮಾಜಿಕ ಪ್ರಜ್ಞೆಯುಳ್ಳ ಲೇಖಕಿಯಾಗಿದ್ದು, ನಮ್ಮ ಸಮಾಜದಲ್ಲಿನ ಸ್ತ್ರೀ-ಪುರುಷ ಸಂಬಂಧಗಳು ಬದಲಾಗಬೇಕೆಂಬುದನ್ನು ಬಲವಾಗಿ ಪ್ರತಿಪಾದಿಸುತ್ತಾರೆ. ಪ್ರಸ್ತುತ ಲೇಖನ ಅವರ "ಸ್ತ್ರೀ-ವಿಮರ್ಶ್‌ಸೆ ಕಹೀಂ ಅಧಿಕ್ ಪುರುಷ್ ವಿಮರ್ಶ್‌ಕೀ ಜ಼ರೂರತ್ ಹೈ" ಎಂಬ ಹಿಂದಿ ಲೇಖನದ ಅನುವಾದ. –ಸಂ.

ಮೀಸಲಾತಿಯ ಬಲದಿಂದ ಗ್ರಾಮ ಪಂಚಾಯಿತ್ತಿಗಳಲ್ಲಿ ಕಡ್ಡಾಯವಾಗಿ ಮಹಿಳೆಯರಿಗೆ ಕೆಲವು ಸ್ಥಾನಗಳು ದೊರೆಯುತ್ತಿವೆ. ಆರಂಭದ ಹಂತದಲ್ಲಿ ಕೇವಲ ತಮ್ಮ ಗಂಡಂದಿರ ರಬ್ಬರ್‌ಸ್ಟಾಂಪುಗಳಂತೆ ಅವರು ಇದ್ದರಾದರೂ ನಿಧಾನವಾಗಿ ತಮ್ಮ ಅಧಿಕಾರದೊಂದಿಗೆ ತಮ್ಮ ಕರ್ತವ್ಯಗಳನ್ನೂ ಗುರುತಿಸಿಕೊಂಡು ಆ ಬಗ್ಗೆ ಸಕ್ರಿಯವಾಗಿದ್ದಾರೆ; ತಮ್ಮ ಅರ್ಹತೆಯನ್ನು ಪ್ರಮಾಣೀಕರಿಸಿದ್ದಾರೆ. ಆದರೆ ಗ್ರಾಮೀಣ ರಾಜಕೀಯದಲ್ಲಿ ಭಾಗವಹಿಸಿದ ಮಾತ್ರಕ್ಕೆ ಅವರಾರೂ ಕೇಂದ್ರೀಯ ರಾಜನೈತಿಕ ಕ್ಷೇತ್ರದ ಭಾಗವಾಗಿ ಬಿಡುವುದಿಲ್ಲ. ದಲಿತರಲ್ಲೂ ಎಷ್ಟು ಜನ ಸ್ತ್ರೀಯರಿಗೆ ಮೀಸಲು ಜಾಗ ಸಿಕ್ಕಿದೆ? ಈಗಾಗಲೇ ಮೀಸಲಾತಿಯಿಂದ ಸ್ಥಾನಪಡೆದವರು ದಲಿತರಿಗಾಗಲಿ, ಮಹಿಳೆಯರ ಹಿತಸಾಧಿಸುವ ನಿಟ್ಟಿನಲ್ಲಾಗಲಿ ಏನು ಮಾಡಿದ್ದಾರೆ? ಬದಲಿಗೆ ಇಬ್ಬರಿಗೂ ನಾಚಿಕೆಗೇಡಿನ ಸ್ಥಿತಿಯನ್ನು ಅವರು ತಂದಿಟ್ಟಿದ್ದಾರೆ ಅಷ್ಟೆ. ರಾಜಕೀಯದ ಕುರ್ಚಿಯೇ ಅಂಥಾದ್ದು. ಯಾರು ಅದರ ಪದತಲದಲ್ಲಿ ಅದು ಬರುತ್ತಾರೊ ಅವರ ಬುದ್ಧಿ ಭ್ರಷ್ಟವಾಗುತ್ತದೆ. ಆಮೇಲೆ ಉಳಿಯುವ ಏಕಮಾತ್ರ ಗುರಿ ಎಂದರೆ ಸ್ವಹಿತಾಸಕ್ತಿ, ಸ್ವಾರ್ಥ ಹಾಗೂ ಕುರ್ಚಿಯನ್ನು ಕಾಪಾಡಿಕೊಳ್ಳುವುದು. ಅದರ ಸಲುವಾಗಿಯೇ ಪಕ್ಷವಿಘಟನೆ, ಭಿನ್ನಮತ, ಸಂಘಟನೆ-ಬೇರ್ಪಡುವಿಕೆಗಳ ನಾನಾ ಬಗೆಯ ಹಾರಾಟಗಳು ನಡೆದಿರುತ್ತವೆ.

ಇನ್ನು ಸಾಂಸ್ಕೃತಿಕ ಅಭಿವ್ಯಕ್ತಿಯಾದ ಸಾಹಿತ್ಯದ ಸ್ತ್ರೀವಾದಿ ವಿಮರ್ಶೆಯ ಬಗ್ಗೆ ಹೇಳುವುದಾದರೆ ಸಾಹಿತ್ಯದೊಳಗಿನ ಸ್ತ್ರೀ ಸಮಸ್ಯೆಗಳ ವಿಮರ್ಶೆಯ ಪ್ರಶ್ನೆ ಮೊದಲ ಹಂತವಾದರೆ ಸ್ತ್ರೀ ವಿಮೋಚನೆಯ ವಿಚಾರಗಳ ಅವಧಾರಣೆ ಅಂಥ ವಿಚಾರಗಳ ಪ್ರತಿಪಾದನೆ ಎರಡನೆಯ ಹಂತ. ರಚನಾತ್ಮಕ ಸಾಹಿತ್ಯ ರಚನೆಯ ದೃಷ್ಟಿಯಿಂದ ನೋಡಿದ್ದಾದರೆ ಆ ವಿಷಯದಲ್ಲಿ ಪುರುಷ ಬರಹಗಾರರ ಕಾಣಿಕೆಯೇನೂ ಕಡಿಮೆಯದಲ್ಲ. ಆದರೆ ಮಹಿಳೆಯ



ಆತ್ಮಸಮ್ಮಾನದ ಭೂಮಿಕೆಯನ್ನು ನಿರ್ವಹಿಸುತ್ತಾ ಬಂದಿರುವುದು ಮಹಿಳಾ ಬರಹವೇ. ಕಳೆದ 70–80 ವರ್ಷಗಳ ರಚನಾತ್ಮಕ ಸಾಹಿತ್ಯದಲ್ಲಿ ಸ್ತ್ರೀ ಸಮಸ್ಯೆಯ ಪ್ರತಿಪಾದನೆಯ ದೊಡ್ಡ ಪ್ರಮಾಣದ ರೂಪುರೇಷೆಯೇ ಹೊಮ್ಮಿಬಂದಿದೆ. ಅದು ಮಹಿಳೆಯರ ದಯನೀಯ ಸ್ಥಿತಿಯಿಂದ ಹಿಡಿದು ಸಮಾಜದ ನಿರೀಕ್ಷಿತ 'ಆದರ್ಶನಾರಿ'ಯ ಪ್ರತೀಕವನ್ನು ನಿರ್ಮಾಣ ಮಾಡುವ ತಹತಹದವರೆಗೂ ಹಬ್ಬಿದೆ. ಅನಂತ ತ್ಯಾಗಗಳ ಪ್ರತಿಮೂರ್ತಿಯಾದ, ಸದಾ ದುಃಖಿನಿಯಾಗಿ ತೊಳಲಾಡುವ, ದುರಂತವೇ ಗತಿಯಾದ ಮಹಿಳೆಯ ಚಿತ್ರ ಸಾಕಷ್ಟು ದೊಡ್ಡ ರಾಶಿಯಾಗಿ ಸೃಷ್ಟಿಯಾಗಿದೆ.

ರೂಢಿಗತವಾದ ಸಾಂಪ್ರದಾಯಿಕ ಸಂಸ್ಕಾರಗಳಿಂದ ಮಹಿಳೆಯು ಬಿಡುಗಡೆ ಹೊಂದಬೇಕಾದರೆ ತನ್ನ ಸ್ವತಂತ್ರ ಅಸ್ಮಿತೆಯನ್ನು ಗುರುತಿಸಿಕೊಂಡು ಅದನ್ನು ನಿರ್ವಹಿಸುವ ಅಧಿಕಾರ, ತನ್ನ ಶಕ್ತಿ, ಪ್ರತಿಭೆಗಳನ್ನು ಸತತವಾಗಿ ವಿಕಾಸಗೊಳಿಸಿಕೊಳ್ಳುತ್ತಾ ಬದುಕಿನ ವಿವಿಧ ಕ್ಷೇತ್ರಗಳಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸುವ ಹೋರಾಟಕ್ಕೆ ಸಿದ್ಧಳಾಗಬೇಕು. ನಾವು ತಿಳಿದ ಮಟ್ಟಿಗೆ ಮಹಿಳಾ ಬರಹಗಾರರೇ ಕಲ್ಪಿಸಿರುವ ಸ್ತ್ರೀತ್ವದ ಮಾದರಿಗಳೂ ಒಂದೋ ಎರಡೋ ಅಪವಾದವನ್ನು ಬಿಟ್ಟರೆ, ಕುಟುಂಬ ನಿರಪೇಕ್ಷಿ, ಸಂಬಂಧ ನಿರಪೇಕ್ಷಿ, ಸಂತಾನ ನಿರಪೇಕ್ಷಿ ಮಾದರಿಗಳಲ್ಲ. ಕುಟುಂಬ, ಸಂಬಂಧಾದಿಗಳೆಲ್ಲ ಅವಶ್ಯಕವಾಗಿ ಬೇಕು. ಆದರೆ ಅವುಗಳ ಸಾಂಪ್ರದಾಯಿಕ ನಿಯಮಗಳು ಮಾತ್ರ ಖಂಡಿತವಾಗಿ ಬದಲಾಗಬೇಕಿದೆ. ಸಂಬಂಧಗಳಿಂದ ಹೊರತಾಗಿ ಉಳಿಯುವುದು ಅಸಾಧ್ಯ. ಅಂಥ ಆಕಾಂಕ್ಷೆಯೂ ಲೇಖಕಿಯರಿಗಿಲ್ಲ. ಆದರೆ ಪುರುಷ ಹಿತಾಸಕ್ತಿಗಾಗಿಯೇ ರೂಪುಗೊಂಡಿರುವ ಆ ಸಂಬಂಧಗಳ ಸ್ವರೂಪಗಳು ಬದಲಾಗುವುದೇ ವಿಮೋಚನೆಗೆ ಉಳಿದಿರುವ ದಾರಿ.

ವೈಚಾರಿಕ ಸ್ತರದಲ್ಲಿ ಸ್ತ್ರೀವಿಮೋಚನೆಯನ್ನು ಕುರಿತ ತಾತ್ತ್ವಿಕ ಚಿಂತನೆ ಮತ್ತು ಅದರ ಪ್ರತಿಪಾದನೆ, ಸ್ಥಾಪನೆಗಳ ಪ್ರಶ್ನೆಯನ್ನು ನೋಡುವುದಾದರೆ ತಾತ್ತ್ವಿಕತೆಯ ಘೋಷಣೆ, ಪ್ರತಿಪಾದನೆ ಸಾಕಷ್ಟು ನಡೆದಿದೆ. ಮಹಿಳೆಯ ನಿಜವಾದ ಸ್ವಾತಂತ್ರ್ಯವೆಂದರೆ ಲೈಂಗಿಕ ಸ್ವಾತಂತ್ರ್ಯವೇ ಎಂಬ ನಿಟ್ಟಿನ ಅತ್ಯುಕ್ತಿಗಳೂ ನಡುವೆ ಕೇಳಿ ಬಂದಿವೆ. ಲೈಂಗಿಕ ಸ್ವಾತಂತ್ರ್ಯ ಎಂಬುದರ ಅರ್ಥವಾದರೂ ಏನು? ಅದರ ಸ್ವರೂಪ ಹೇಗಿರುತ್ತದೆ? ನಾವಿರುವ ಕಾಲಕ್ಕೆ ನಮ್ಮ ಸಾಮಾಜಿಕ ಸಂದರ್ಭಕ್ಕೆ ಈ ವಿಚಾರ ಎಷ್ಟರ ಮಟ್ಟಿಗೆ ಸಂಭಾವ್ಯವಾಗಿದೆ? ಎಂಬುದನ್ನು ನಾವು ವಿಚಾರ ಮಾಡಬೇಕಿದೆ.

ನಮ್ಮ ಸಮಾಜದಲ್ಲಿ ಲೈಂಗಿಕವಾಗಿ ಅನಿರ್ಬಂಧಿತ ಸಂಬಂಧಗಳಲ್ಲಿ ತೊಡಗುವ ವೇಶ್ಯೆಯರು ಇಂತಹ ಸ್ವಾತಂತ್ರ್ಯವನ್ನು ಅನುಭವಿಸುತ್ತಾರೆಯೆ? ಅಥವಾ ಪ್ರಾಣಿಗಳಿಗೆ ಇಂಥ ಸ್ವಾತಂತ್ರ್ಯವಿದೆಯೆ? ಎಂತೆಂಥ ದುರ್ಭರ ಅಸಹಾಯಕ ಪರಿಸ್ಥಿತಿಗಳಲ್ಲಿ ವೇಶ್ಯೆಯರು ಇಂಥ ಬದುಕನ್ನು ಮೇಲೆ ಹೇರಿಕೊಳ್ಳಬೇಕಾಗಿ ಬರುತ್ತದೆ? ಇಂಥ ಸ್ವಾತಂತ್ರ್ಯಕ್ಕೆ ಅವರು ತೆರಬೇಕಾಗಿರುವ ಬೆಲೆಯಾದರೂ ಎಂಥದು ಎಂಬ ಪ್ರಶ್ನೆಗಳನ್ನು ಲೈಂಗಿಕ ಸ್ವಾತಂತ್ರ್ಯ ವಾದಿಗಳೆದುರು ಕೇಳುವುದುಂಟು.

ಆದರೆ ಸಮಾಜ ಬದಲಾಗತೊಡಗಿರುವ ಹಂತದಲ್ಲಿ ಲೈಂಗಿಕ ಸ್ವಾತಂತ್ರ್ಯದ ಕ್ರಾಂತಿಕಾರಿ ಧೋರಣೆ ಮುಂದಡಿ ಇಟ್ಟಿದೆ ಸಂಕ್ರಮಣಶೀಲ ಸಮಾಜದಿಂದ ಅದಕ್ಕೆ ವಿರೋಧ ಉಂಟಾಗುವುದು ಸಹಜ. ಆದರೆ ಯಥಾಸ್ಥಿತಿಯನ್ನು ಬದಲಿಸಬೇಕಾದರೆ ಲೈಂಗಿಕಮುಕ್ತತೆಯ ಕ್ರಮವೂ ಅನಿವಾರ್ಯವಲ್ಲವೆ? ಈ ಬಗ್ಗೆ ನಮ್ಮ ಅಸಹಮತ ತೋರುವ ಮಾತಿಲ್ಲ. ಆದರೆ ಪರಿವರ್ತನೆಯ ಸಲುವಾಗಿ ಇಡುವ ಈ ಹೆಜ್ಜೆ ಕೇವಲ ಒಂದು ಹೆಜ್ಜೆಯಷ್ಟೇ ಆಗಿರಬೇಕೆ ಹೊರತು ಅದೇನೋ ದೊಡ್ಡ 'ದೂರ ಜಿಗಿತ'ವಲ್ಲ, ಮನುಷ್ಯರೆಲ್ಲಾ ಮುಖವಡಿಯಾಗಿ ಹೋಗಿ ಬೀಳುವುದಕ್ಕೆ.

ಸಾಮಾಜಿಕ ಪರಿವರ್ತನೆ ನಿಧಾನವಾಗಿ ಒಂದೊಂದೇ ಹೆಜ್ಜೆಯಾಗಿ ಮುಂದುವರೆಯುತ್ತದೆ. ಕೆಲವು ಸಲ ಅದರಲ್ಲಿ ದಿಢೀರನೆ ಒಂದು ವೇಗದ ಗತಿ ಅಥವಾ ಬಿರುಗಾಳಿ ಕೂಡ ಉಂಟಾಗಬಹುದು. ಆದರೆ ಇಂಥ ವೇಗದ ಬದಲಾವಣೆ ಮೂಲದಲ್ಲಿಯೇ ಉಂಟಾಗಿರುತ್ತದೆ. ಸ್ವಂತದ ಸಭ್ಯತೆ, ಸಂಸ್ಕೃತಿಗಳಿಂದಾಗಿ ಹಾಗೂ ಸುತ್ತಲಿನ ಪರಿಸ್ಥಿತಿ, ಬೇರೆಯವರ ದಬಾವಣೆಗಳಿಂದಾಗಿ ಲೈಂಗಿಕ ಸ್ವಾತಂತ್ರ್ಯದಂತಹ ಬೆಚ್ಚಿ ಬೀಳಿಸುವ ಪ್ರಶ್ನೆಗಳ ಬಲವಾದ ಗಾಳಿಯನ್ನು ನೀವು ತಳ್ಳಿಹಾಕಿದ್ದಾದರೆ ಕಾಲವೇ ಅವುಗಳನ್ನು ಕಿತ್ತೊಗೆದು ಬಿಡುತ್ತದೆ. ಈ ಬಗೆಯ ವಿಚಾರಗಳು ಮುಖ್ಯವಾಗಿ ಸ್ತ್ರೀವಾದಿ ಚಳವಳಿಯ ಸಹಜ ಬೆಳವಣಿಗೆಗೆ ಅಡ್ಡಿಗಳನ್ನು ಸೃಷ್ಟಿಸಬಲ್ಲವು.

ಸ್ತ್ರೀಯರ ದೇಹದ ಬಗ್ಗೆ 'ಪರಿಶುದ್ಧತೆ'ಯ ಎಂಥ ಪದಕ ಜೋತಾಡುತ್ತಿದೆಯೋ ಅದರಿಂದ ಮಹಿಳೆ ಅವಶ್ಯಕವಾಗಿ ಮುಕ್ತಳಾಗಬೇಕು, ನಿಜ. (ಇಂಥ ಲೈಂಗಿಕ 'ಪಾವಿತ್ರ್ಯದ' ಪರಿಕಲ್ಪನೆ ಪುರುಷರಿಗೆ ಅಗತ್ಯವಿಲ್ಲ. ಅವರೆಂದೋ ಅದರಿಂದ ಮುಕ್ತರಾಗಿದ್ದಾರೆ.) ಆದರೆ ವಿಧವೆಯರು, ವಿಚ್ಛೇದಿತ ಮಹಿಳೆಯರು, ಅತ್ಯಾಚಾರಕ್ಕೆ ಬಲಿಪಶುಗಳಾದವರೇ ಮುಂತಾದವರು ಇಂಥ "ಪರಿಶುದ್ಧತೆ" ಪರಿಕಲ್ಪನೆಗೆ ಬಾಹಿರವಾಗುವುದರಿಂದಲೇ ಬೇರೆ ಪುರುಷರಿಗೆ ತ್ಯಾಜ್ಯರೆನ್ನಿಸಬೇಕೆ? ನಿಜ ಹೇಳುವುದಾದರೆ ಈ ಪರಿಶುದ್ಧತೆ ಪ್ರಶ್ನೆ ಪುರುಷರದೇ ಹೊರತು ಸ್ತ್ರೀಯರದಲ್ಲ. ಏಕೆಂದರೆ ಸ್ತ್ರೀದೇಹಕ್ಕೆ ಸಂಬಂಧಿಸಿದಂತೆ ಪಾಪ–ಪಾವಿತ್ರ್ಯಗಳ ಪರಿಕಲ್ಪನೆಗಳು ಹುಟ್ಟಿ, ಬೇರೂರಿ ಕುಳಿತಿರುವುದು ಪುರುಷರ ಮನಸ್ಸುಗಳಲ್ಲಿಯೇ.

ಲೈಂಗಿಕ ಸ್ವಾತಂತ್ರ್ಯದ ತಳಹದಿಯ ಮೇಲೆ ತಮ್ಮ ಮಹತ್ವಾಕಾಂಕ್ಷೆಗಳ ಸೋಪಾನವನ್ನು ಏರಲು ಯತ್ನಿಸುವ ಮಹಿಳೆಯರ ಬಗ್ಗೆ ಮೇಲಿನ ಮಾತನ್ನು ಹೇಳುತ್ತಿಲ್ಲ. Casting Couch ಅವಸ್ಥೆಯನ್ನು ಬೆಳೆಸುವುದರಲ್ಲಿ ಇಂಥ ಮಹಿಳೆಯರ ಕಾಣಿಕೆ ಎಷ್ಟೆಂಬುದು ಹೇಳುವುದು ಕಷ್ಟ.

ಇಷ್ಟಾದರೂ ಒಟ್ಟಾರೆ ಒಂದು ತಾತ್ತ್ವಿಕ ಪರಿಷ್ಕರಣೆ ಸೂಚಿಸಬಹುದಾದರೆ ಸ್ತ್ರೀವಾದವು ಪ್ರತಿಪಾದಿಸುವ ವಿಮೋಚನೆಯ ಪ್ರಶ್ನೆ ಸ್ತ್ರೀಯರಿಗಿಂತ ಹೆಚ್ಚಾಗಿ ಪುರುಷರ ವಿಚಾರಗಳಲ್ಲಿನ ಪ್ರಶ್ನೆಯಾಗಿದೆ. ಕಳೆದ 35–40 ವರ್ಷಗಳಲ್ಲಿ, ಮಹಿಳೆ ಹಳೆಯ ಸಂಪ್ರದಾಯಸ್ಥ ಸಂಸ್ಕಾರಗಳಿಂದ ಬಹಳಷ್ಟು ಮುಕ್ತಳಾಗುತ್ತ ಬಂದಿದ್ದಾಳೆ. ಆದರೆ ಪುರುಷ ಮಾತ್ರ ಇಂದಿಗೂ ಅವೇ ಹಳೆಯ ಸಂಸ್ಕಾರಗಳ ಸಂಕೋಲೆಯಲ್ಲೇ ಬಂಧಿತನಾಗಿದ್ದಾನೆ. ಅತ್ಯಂತ ಆಧುನಿಕತೆಯ ಬಲವುಳ್ಳ ಪುರುಷ ಕೂಡ ವ್ಯಾವಹಾರಿಕ ತಳಹದಿಯಲ್ಲಿ ಓಬಿರಾಯನ ಕಾಲದ ಕಂದಾಚಾರದ ತುದಿಯಲ್ಲಿ ಇರುವವನೇ ಆಗಿ ತೋರುತ್ತಾನೆ. ಚರ್ಮದ ಒಂದು ಪದರವನ್ನು ತೆರೆದರೆ ಸಾಕು, ಕೆಳಗಿರುವುದು ರೂಢಿಗತ ಸಂಸ್ಕಾರಗಳಿಂದ ಗೃಹೀತನಾದ ಅದೇ ಊಳಿಗಮಾನ್ಯ ಪತಿರಾಯನೇ. ಇಂತಹ ಸಾಂಪ್ರದಾಯಿಕ ಸಂಸ್ಕಾರಗಳಿಂದ ಪುರುಷರು ಹೊರಬಂದದ್ದೇ ಆದರೆ, ಅವರದೇ ಆದ ಎಲ್ಲ ತತ್ತ್ವ ವಿಚಾರಗಳು ಎಲ್ಲ ಕ್ಷೇತ್ರಗಳು ಅವರ ವರ್ಚಸ್ಸಿನಡಿಯಲ್ಲೇ ಜರುಗುವ ಪ್ರತಿಯೊಂದು ಸಂಗತಿಯೂ ಮಹಿಳೆಯರಿಗೆ ತನ್ನಿಂದ ತಾನೇ ಮುಕ್ತವಾಗಬಲ್ಲದು.

["ಕಥಾದೇಶ್" ಎಂಬ ಹಿಂದಿ ಮಾಸಪತ್ರಿಕೆಯ ಮಾರ್ಚ್, 2008ರ ಸಂಚಿಕೆಯಿಂದ ಇದನ್ನು ಆರಿಸಿಕೊಳ್ಳಲಾಗಿದೆ.]

❑

ನೀವೂ ಓದಿ

'ಮಗಳು ಕಂಡ ಕುವೆಂಪು'– ತಾರಿಣಿ ಚಿದಾನಂದ "ಮಾದರಿ ಕಥಾನಕ"

● *ಲಲಿತಾ ಸಿದ್ದಬಸವಯ್ಯ*

ತಮ್ಮ ತಾಯ್ತಂದೆಯರನ್ನು ಕುರಿತು ಮಕ್ಕಳು ಪುಸ್ತಕ ಬರೆಯುವುದು ಅಪರೂಪವಲ್ಲ. ತಮ್ಮ ಸುಪ್ರಸಿದ್ಧ ಅಪ್ಪ ಅಮ್ಮನ ಬಗ್ಗೆ ಮಕ್ಕಳು ಬರೆದ ಜೀವನ ಕಥೆಗಳಿವೆ. ಸುಪ್ರಸಿದ್ಧರಾದ ಮಕ್ಕಳು ತಮ್ಮ ಹೆತ್ತವರನ್ನು ಕುರಿತು ಬರೆದ ಪುಸ್ತಕಗಳೂ ಹೇರಳವಾಗಿವೆ. ಆದರೆ ಅಣ್ಣ–ತಂಗಿ ಜೋಡಿಯೊಂದು ತಮ್ಮ ಅಪ್ಪನ ಕುರಿತು ವಿಭಿನ್ನವಾಗಿ ಬರೆದ ಜೋಡಿಪುಸ್ತಕಗಳ ದಾಖಲೆ ಕನ್ನಡದಲ್ಲಿ ಮಾತ್ರವೇ ಏನೋ!

ಕುವೆಂಪುರವರು ಗತಿಸಿದ ಎರಡು ವರ್ಷ ಬಳಿಕ ಅವರ ಹಿರಿಯಮಗ ಪೂರ್ಣಚಂದ್ರ ತೇಜಸ್ವಿಯವರು ತಮ್ಮ ತಂದೆಯನ್ನು ಕುರಿತಂತೆ 'ಅಣ್ಣನ ನೆನಪುಗಳು' (1996) ಪುಸ್ತಕ ಪ್ರಕಟಿಸಿದರು. ಇದಾದ ಹತ್ತು ವರ್ಷಗಳ ನಂತರ ಕುವೆಂಪುರವರ ಕಿರಿಯ ಮಗಳು ತಾರಿಣಿ ಚಿದಾನಂದ 'ಮಗಳು ಕಂಡ ಕುವೆಂಪು' ಎನ್ನುವ 515 ಪುಟಗಳ ಪುಸ್ತಕ ಪ್ರಕಟಿಸಿದ್ದಾರೆ. ಈ ಇಬ್ಬರ ಬರಹದ ಕೇಂದ್ರವ್ಯಕ್ತಿ ಕುವೆಂಪುವೇ ಆದರೂ ತೇಜಸ್ವಿಯವರ ಗ್ರಹಿಕೆ ಮತ್ತು ಅಭಿವ್ಯಕ್ತಿಗೂ, ಆಪ್ತಸಮಾಲೋಚನೆಯಂತೆ ಸಾಗುವ ತಾರಿಣಿಯವರ ಬರವಣಿಗೆಗೂ ಸಂಪೂರ್ಣ ಭಿನ್ನತೆಯಿದೆ. ಒಂದೇ ಮನೆಯಲ್ಲಿ ಒಂದೇ ಕಾಲದಲ್ಲಿ ಒಂದೇ ಪರಿಸರದಲ್ಲಿ ಬೆಳೆದ ಎರಡು ಮನಸ್ಸುಗಳು ತಮ್ಮ ತಂದೆಯನ್ನು ಪರಿಭಾವಿಸುವದರಲ್ಲಿರುವ ಸೂಕ್ಷ್ಮ ವೈರುಧ್ಯಗಳು ಕ್ಷಣಮಾತ್ರ ಸೋಜಿಗವನ್ನುಂಟು ಮಾಡಿದರೂ, ತತ್‌ಕ್ಷಣವೇ ಅನ್ನಿಸುವುದು ಇದು ಹೀಗೆಯೇ ಇರಬೇಕಾದದ್ದು ಎಂಬ ವಾಸ್ತವ! ಈ ಅಣ್ಣ ತಂಗಿಯರ ಹಿರಿಮೆ ಇರುವುದೇ ಇಲ್ಲಿ! ಅವರು ಹೇಗೆ ಬರವಣಿಗೆಯಲ್ಲಿ ಪರಸ್ಪರರನ್ನು ಆವರಿಸುವುದಿಲ್ಲವೋ ಹಾಗೆಯೇ ನಿಲುವುಗಳಲ್ಲೂ ಒಬ್ಬರನ್ನೊಬ್ಬರು ಅವಲಂಬಿಸುವುದಿಲ್ಲ. ತಮ್ಮ ತಂದೆಯ ವಿಗ್ರಹವನ್ನು ಕಡೆಯುವುದರಲ್ಲಿ ಇಬ್ಬರ ಹತಾರಗಳೂ ಬೇರೆ ಬೇರೆ. ವಾಸ್ತವವಾಗಿ ಇವರಿಬ್ಬರೂ ಮಾಡಿರುವುದು ವಿಗ್ರಹ ನಿರ್ಮಾಣವನ್ನಲ್ಲ – ಭಂಜನವನ್ನು!

ಕುವೆಂಪು 'ವಿಗ್ರಹ' ನಿರ್ಮಾಣ ಕಾರ್ಯ 1940–50ರಲ್ಲೇ ಆಗಿ ಬಿಟ್ಟಿತ್ತೆಂದು ತೋರುತ್ತದೆ. ಅವರ ಬರಹಗಳ ವಿಮರ್ಶೆ, ಆ ವಿಮರ್ಶೆಗಳ ಮೇಲಿನ ವಿಮರ್ಶೆ, ವಿಮರ್ಶೆಗಳ ತುಲನಾತ್ಮಕ ವಿಮರ್ಶೆ, ವಿಮರ್ಶಕರ ಮೇಲಿನ ವಿಮರ್ಶೆ ಇತ್ಯಾದಿಗಳಿಂದ ಕುವೆಂಪು 'ವಿಗ್ರಹ' ಕಡೆದು ಅದಕ್ಕೆ ರಾಶಿ ರಾಶಿ ಹಾಲು ತುಪ್ಪ ಅಭಿಷೇಕಗೈದು ಸುಂದರ ಬಿಂಬವೊಂದು ತನ್ನ ರೇಖಾನಿರ್ದುಷ್ಟತೆಯನ್ನು ಜಿಡ್ಡಿನಲ್ಲಿ ಹುದುಗಿಸಿಕೊಳ್ಳುವ ಹಾಗೆ ಮಾಡಿ, ಕುರುಡು ಭಕ್ತಿಯೊಂದನ್ನು ಹುಟ್ಟುಹಾಕಿದ ಗುಂಪನ್ನು ಮೌನವಾಗಿ ಈಕ್ಷಿಸುತ್ತ ಬಂದ ತೇಜಸ್ವಿ ಮತ್ತು ತಾರಿಣಿಯವರು ತಮ್ಮ ಸರದಿ ಪಕ್ವವಾದ ಕೂಡಲೇ ಮಾರ್ಜಕ ಮತ್ತು ಬ್ರಷ್ಷುಗಳನ್ನು ಹಿಡಿದು ಮೂರ್ತಿಯ ಮೇಲೆ ಹಿಡಿದಿದ್ದ ಮೇಣಗಬಟವನ್ನು ತೊಳೆದು ತೆಗೆದು ಸ್ಪಷ್ಟ ರೇಖೆಗಳ ಸುಂದರ ಬಿಂಬವನ್ನು ಕನ್ನಡಿಗರಿಗೆ ಒದಗಿಸಿದ ಹಾಗಿದೆ ಅವರ ಈ ಎರಡೂ ಪುಸ್ತಕಗಳು!

ಕುವೆಂಪು, ಕಾಲಧರ್ಮವೊಂದು ತಾನೇ ಎದ್ದು ನಿಂತು ತನಗೆ ಜರೂರಾಗಿ ಬೇಕಾಗಿದ್ದ ಲೇಖಕನನ್ನು ತಯಾರು ಮಾಡಿಕೊಂಡಂಥ ಉದಾಹರಣೆ ಕುವೆಂಪು ಕನ್ನಡ ಬರವಣಿಗೆ ಆರಂಭಿಸಿದ ಕಾಲಕ್ಕೆ ಕನ್ನಡಕ್ಕೆ ಅತ್ಯಗತ್ಯವಾಗಿದ್ದುದು ಅದುವರೆಗೆ ಲೇಖನಿಯನ್ನೇ ಹಿಡಿಯದ ಆದರೆ ಒಟ್ಟು ಕನ್ನಡ ಸಮಾಜದಲ್ಲಿ ಮೂರನೇ ಎರಡರಷ್ಟಿರುವ ಅವೈದಿಕ ಜಾತಿ ಶ್ರೇಣಿಗಳ ಬರಹಗಾರರು ತಂತಮ್ಮ ಸಾಮಾಜಿಕ ಹಿನ್ನೆಲೆಗಳ ಒಳಸೂಕ್ಷ್ಮಗಳನ್ನು ಕಲಾತ್ಮಕವಾಗಿ ಕಟ್ಟಿಕೊಡುವಂತಹ ಒಂದು ಲೇಖಕ


> *.....ಒಮ್ಮೆ ಸಂಜೆ ಹೊತ್ತು ರತ್ನಾಕರ ಮಾವರೊಡನೆ ಸವಳಂಗ ರಸ್ತೆಯಲ್ಲಿ ಕಾಡಿನ ನಡುವೆ ಸಂಚಾರ ಹೋಗಿ ಬಂದರು. ಮನೆಯೊಳಗೆ ಬರುತ್ತಿದ್ದಂತೆ ನಮ್ಮನ್ನೆಲ್ಲಾ ಕರೆದರು. ಎರಡು ಕೈ ಸೇರಿಸಿ ಏನನ್ನೋ ಮರೆ ಹಿಡಿದು ನಿಂತಿದ್ದರು. 'ಏನೋ ತಮಾಷೆ ಇದೆ ನೋಡಿ ಬನ್ನಿ, ಏನೆಂದು ಊಹಿಸಿ' ಎಂದು ಕುತೂಹಲ ಕೆರಳಿಸಿದರು. ಯಾರೂ ಊಹಿಸಲು ಸಾಧ್ಯವಿರಲಿಲ್ಲ. ದೀಪ ಆರಿಸಿ ಕತ್ತಲೆಮಾಡಿ ಎಂದಾಗ ಎಲ್ಲರೂ ಮಿಣುಕುಹುಳು ಎಂದು ಕೂಗಿದೆವು. ಮಿಣುಕುಹುಳು ಅಲ್ಲ ಎಂದು ಮರೆಮಾಡಿದ್ದ ಕೈ ನಿಧಾನ ತೆಗೆದಾಗ ಸಣ್ಣ ಟಾರ್ಚ್ ಬಿಟ್ಟಂತೆ ಎರಡು ಬೆಳಕು ಹೊಳೆಯುತ್ತಿವೆ! ನಿಧಾನ ಬೆಳಕು ಕಡಿಮೆಯಾಗುತ್ತಿತ್ತು. ಮತ್ತೆ ತುಂಬಾ ದೊಡ್ಡದಾಗುತ್ತಿತ್ತು. ಎಲ್ಲರೂ ಕುತೂಹಲದಿಂದ ನೋಡಿದೆವು, ಏನಿರಬಹುದೆಂದು. ದೀಪ ಹಚ್ಚಿದೆವು. ನೋಡಿದಾಗ ಮೂರು ಅಂಗುಲ ಉದ್ದರ ಕಂಬಳಿ ಹುಳುವಿನಂತಹ ಹುಳುಕಡ್ಡಿಯಲ್ಲಿರುವ ದೊಡ್ಡ ಎಲೆಯ ಮೇಲೆ ಅಂಟಿ ಕುಳಿತಿದೆ. ಅದರ ಮೈಮೇಲೆ ಕೂದಲು ಇರಲಿಲ್ಲ. ನೋಡಲು ವಿಕಾರವಾಗಿತ್ತು. ಕಣ್ಣು ದೊಡ್ಡ ದೊಡ್ಡದಾಗಿ ಹೊಳೆಯುತ್ತಿತ್ತು. ಅದರ ಕಣ್ಣಿಂದಲೆ ಆ ರೇಡಿಯಂ ತರಹ ಬೆಳಕು ಹೊಮ್ಮುತ್ತಿತ್ತು.*
>
> *ಹುಳು ಎಲ್ಲಿತ್ತು? ಹೇಗೆ ಸಿಕ್ಕಿತೆಂದು ಕೇಳಿದಾಗ ತಂದೆಯವರು ವಿವರಣೆ ಕೊಟ್ಟರು. ಸಂಚಾರ ಮುಗಿಸಿ ಹಿಂದಿರುಗುವಾಗ ಕತ್ತಲೆಯಾಯಿತು. ಕಾಡಿನ ಹತ್ತಿರ ಗಿಡದ ಒಂದು ಎಲೆಯ ಮೇಲೆ ನನಗೆ ಈ ಬೆಳಕು ಕಾಣಿಸಿತು. ನಾನು ಮೊದಲು ಮಿಣುಕುಹುಳು ಎಂದು ಭಾವಿಸಿದೆ. ಆದರೆ ಹಾರುತ್ತಿಲ್ಲ. ಕುಳಿತಲ್ಲೇ ಇದೆ ಎಂದು ಹತ್ತಿರ ಹೋದಾಗ ಈ ಹುಳದ ಕಣ್ಣಿಂದ ಬೆಳಕು ಬಂದದ್ದು ಗೊತ್ತಾಯಿತು. ಕಣ್ಣಿಂದ ಬೆಳಕು ಬಿಡುವ ಹುಳು ಇದುವರೆಗೂ ನಾನು ನೋಡಿಲ್ಲ. ನಿಮಗೆಲ್ಲಾ ತೋರಿಸೋಣವೆಂದು ಎಲೆ ಕಡ್ಡಿ ಸಮೇತ ಕಿತ್ತು ತಂದೆನು. ಎಲ್ಲರೂ ನೋಡಿದ ಮೇಲೆ ಗಿಡಕ್ಕೆ ಬಿಟ್ಟುಬಿಡಿ ಎಂದರು.*
>
> *('ಮಗಳು ಕಂಡ ಕುವೆಂಪು' – ಪು. 32–33)*

ಸತ್ತ್ವ ಆ ಕಾಲದಲ್ಲಿ ಹುಟ್ಟದೇ ಹೋಗಿದ್ದರೆ ಕನ್ನಡ ಸಾಹಿತ್ಯವೆಂಬುದು ಮರೆತುನಿಂತ ಕೆರೆಯಾಗಿ, ಪದೇ ಪದೇ ಕ್ಲೋರೀನ್ ಸುರಿದು ಕುಡಿಯುವ ನೀರನ್ನು ಬಸಿದುಕೊಳ್ಳಬೇಕಾದ ಸ್ಥಿತಿಗೆ ತಲುಪುತ್ತಿತ್ತು. ಕಾಲಧರ್ಮ ಒಬ್ಬ ಕುವೆಂಪುವನ್ನು ತಯಾರುಮಾಡಿಕೊಂಡಿದ್ದೇ ತಡ, ಅವರ ನೂರಾರು ನಕಲುಗಳು, ಸಾವಿರಾರು ಮಾದರಿಗಳು ತಯಾರಾಗಿಬಿಟ್ಟವು. ಇವುಗಳಲ್ಲಿ ಕೆಲವು ಗಟ್ಟಿ, ಜೊಳ್ಳುಗಳು ಮಾಡಿದ ಕೆಲಸ ಕುವೆಂಪು 'ಪೂಜೆ'.

ಈ 'ಪೂಜೆ'ಯನ್ನು ಕುವೆಂಪು ಸ್ವತಃ ಹೇಗೆ ಸ್ವೀಕರಿಸಿದ್ದರು? ಅವರ ದೈನಂದಿನ ಜೀವನ, ಕೌಟುಂಬಿಕ ನೈಮಿತ್ತಿಕ, ಅಂಟು–ನೆಂಟುಗಳು ಎಲ್ಲರ ಹಾಗೇ ಇತ್ತೋ ಅಥವಾ ವಾಲ್ಮೀಕಿ ಋಷಿಯ ತಪಸ್ವೀ ಜೀವನವಾಗಿತ್ತೋ? ಇಂತಹ ಅನೇಕ ಕುತೂಹಲಗಳು, ಕುವೆಂಪು ಅವರ ಒಂದು ಸಾಲನ್ನೂ ಓದದೆ ಕೈಯಿಟ್ಟ ಕಡೆಯೆಲ್ಲ ಸಿಗುತ್ತಿದ್ದ ಒಂದೋ ಅತಿರಂಜಿತ ಇಲ್ಲವೇ ಅತಿಭಂಗಿತ ವ್ಯಕ್ತಿಚಿತ್ರಗಳು, ಪರಿಚಯಗಳು ಇತ್ಯಾದಿಗಳ ಮೂಲಕ ಕುವೆಂಪುವನ್ನು ಕಟ್ಟಿಕೊಂಡಿದ್ದ ಸಾವಿರಾರು ಜನರ ಮನಸ್ಸಿನಲ್ಲಿದ್ದವು. ಈ ಎಲ್ಲದಕ್ಕೆ ಉತ್ತರವೇನೋ ಎಂಬಂತೆ ತೇಜಸ್ವಿ–ತಾರಿಣಿ ಎಂಬ ಅಣ್ಣ ತಂಗಿ ಕುವೆಂಪುರವರನ್ನು ನೇರ ನೆಲದ ಮೇಲಿಂದ ಬಣ್ಣಿಸಿ ಓದುಗರ ಮುಂದೆ ಇಟ್ಟಿದ್ದಾರೆ. ಈಗ ಕನ್ನಡಿಗರಿಗೆ, ಕನ್ನಡದ ಅದ್ಭುತ ಲೇಖಕನೊಬ್ಬನನ್ನು ಮೂರುವಿಧದಲ್ಲಿ ಕಂಡು ಅರ್ಥೈಸಿಕೊಳ್ಳುವ ಮಾರ್ಗ ತೆರೆದಿದೆ. ಅವು ಯಾವುವೆಂದರೆ,

1. ಕುವೆಂಪುರವರ ಸಮಸ್ತ ಸಾಹಿತ್ಯ
2. ಕುವೆಂಪುರವರ ಆತ್ಮಕಥನ 'ನೆನಪಿನ ದೋಣಿಯಲ್ಲಿ'
3. ಮಗ ತೇಜಸ್ವಿ, ಮಗಳು ತಾರಿಣಿ ಬರೆದ 'ಅಣ್ಣನ ನೆನಪು', 'ಮಗಳು ಕಂಡ ಕುವೆಂಪು' – ಪುಸ್ತಕಗಳು

ತೇಜಸ್ವಿಯವರ 'ಅಣ್ಣನ ನೆನಪು' ಬರುವ ವೇಳೆಗಾಗಲೇ ಅವರು ಕನ್ನಡದ ಪ್ರಮುಖ ಲೇಖಕರಲ್ಲೊಬ್ಬರು, ಅನೇಕ ಚಳವಳಿಗಳ ನೇತಾರರು, ಸ್ಪಷ್ಟ ನಿಲುವಿನ ನಿಷ್ಠುರವಾದಿಗಳೆಂದು ಗುರುತಿಸಲ್ಪಟ್ಟವರು. ಆದರೆ ತಾರಿಣಿಯವರಿಗೆ ಇದು ಮೊಟ್ಟಮೊದಲ ಬರವಣಿಗೆ! ಅದೂ ಹೆಚ್ಚೂ ಕಡಿಮೆ ಐವತ್ತು ವರ್ಷಗಳ ಪ್ರಾಯದಲ್ಲಿ! ಪುಸ್ತಕವು ಚಿಕ್ಕದೇನೂ ಅಲ್ಲ, 515 ಪುಟಗಳ ಬೃಹತ್ ಹೊತ್ತಿಗೆಯೇ ಆಗಿದೆ. ಮೊದಲ ಬರವಣಿಗೆಯ ಒತ್ತಡವನ್ನು ಅವರು ಹೇಗೆ ತಾಳಿಕೊಂಡರು ಬರೆಯುವ ಅಭ್ಯಾಸವೇ ಇಲ್ಲದ ಅವರ ಓಘವನ್ನು ಯಾವುದು ಮುನ್ನಡೆಸಿತು ಎಂದು ಯೋಚಿಸಿದರೆ, ಎದ್ದು ಕಾಣುವುದು, ಒಂದು, ಬರವಣಿಗೆಯಲ್ಲಿನ ಸರಳತೆ. ಎರಡು, ಅವರು ಉದಯರವಿಯನ್ನೂ ಕುವೆಂಪುರವರನ್ನೂ ಒಂದೇ ಆಗಿ ಕಂಡು ಪ್ರೀತಿಸಿರುವ ಪರಿ. ಪುಸ್ತಕದ ಒಂದೊಂದೇ ಅಧ್ಯಾಯಗಳನ್ನು ಮುಗಿಸಿದಂತೆಲ್ಲಾ, ತಾರಿಣಿಯವರು ಅದೆಷ್ಟು ಆಳವಾಗಿ ಕುವೆಂಪುರವರನ್ನು ಪ್ರೀತಿಸಿದ್ದಾರೆ ಇದರ ಸ್ಪರ್ಶ ನಮ್ಮನ್ನೂ ತಟ್ಟುತ್ತ, ಒಮ್ಮೊಮ್ಮೆ ತಾರಿಣಿಯವರು ಕುವೆಂಪುರವರ ತಾಯಿಯೋ, ಮತ್ತೆ ಇಳಿವಯದಲ್ಲಿ ಅವರನ್ನು ಸಲಹಲೆಂದೇ ತಾರಿಣಿಯವರ ರೂಪದಲ್ಲಿ ಬಂದರೋ ಎಂದೂ ಅನ್ನಿಸುತ್ತದೆ.



ಮಗಳು ಕಂಡ ಕುವೆಂಪು

ಲೇ. : ತಾರಿಣಿ ಚಿದಾನಂದ
ಪ್ರ. : ಪುಸ್ತಕ ಪ್ರಕಾಶನ, 91, 9ನೇ ಮೇನ್ ಸರಸ್ವತಿ ಪುರಂ, ಮೈಸೂರು–570 009
ಮು : 2007
ಬೆಲೆ : ರೂ. 240/–

'ಏಳು, ಓ ತಾಯಿ ಕುಂಡಲಿನಿ'

'.................. ಚಳಿ ಹೆಚ್ಚಾಗಿ ಬೆಚ್ಚನೆಯ ಬಿಸಿಲು ಕೊಠಡಿ ಕಿಟಕಿಯಿಂದ ತೂರಿ ಬಂದಾಗ, ನಮಗೆ ಇನ್ನೂ ಹಿತವಾಗಿ ನಿದ್ದೆ ಬರುತ್ತಿತ್ತು. ನಾವು ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಓದುವಾಗ ಚಳಿಗಾಲದ ಸಮಯದಲ್ಲಿ ಭಾನುವಾರದ ರಜಾದಿನಗಳಲ್ಲಿ ಬೆಳಗಿನ ನಿದ್ದೆಯು ಬಹಳ ಆಪ್ಯಾಯಮಾನವಾಗಿರುತ್ತಿತ್ತು. ಆ ಸಮಯದಲ್ಲಿ ನಮ್ಮ ಕೊಠಡಿಯ ಕಿಟಕಿಯಿಂದ ಎಳೆಬಿಸಿಲು ನಾವು ಮಲಗುವ ಜಾಗಕ್ಕೆ ಬೀಳುತ್ತಿತ್ತು. ನಾವು ಬೆಚ್ಚಗೆ ನೊಚ್ಚಗೆ ಹೆಚ್ಚು ಸಮಯ ಮಲಗಿರುತ್ತಿದ್ದವು. ತಂದೆಯವರು ವಾಕಿಂಗ್ ಮುಗಿಸಿ ಬಂದಾಗ ಇನ್ನೂ ನಾವು ಮಲಗಿದ್ದರೆ 'ಏಳಿ ಏಳಿ ಆಗಲೇ ಕಿಟಕಿಯಿಂದ ಎಳೆ ಬಿಸಿಲು ಬಂದಿದೆ. ನನ್ನ ವಾಕಿಂಗ್ ಮುಗಿಯಿತು. ಎಲ್ಲಾ ಕಾಫಿ ಕುಡಿಯೋಣ ಬನ್ನಿ' ಎಂದು ಎಚ್ಚರಿಸುತ್ತಿದ್ದರು. ಒಮ್ಮೆ ಕೂಗಿದಾಗ ನನಗೆ ಎಚ್ಚರವಾಗುತ್ತಿರಲಿಲ್ಲ. ಹಾಗೇ ಅತ್ತ ಇತ್ತ ಹೊರಳಿ ಮತ್ತೆ ನಿದ್ದೆಗೆ ಸರಿಯುತ್ತಿದ್ದೆ. ಅದನ್ನು ಗಮನಿಸಿ ಮತ್ತೆ ತಂದೆಯವರು ಎಚ್ಚರಿಸುವ ಪ್ರಯತ್ನದಲ್ಲಿ 'ನೋಡಕ್ಕಾ ಹೇಗೆ ಬಿಸಿಲು ಬಂದಿದೆ ಏಳು,' ಎಂದು ಹೇಳಿ

ಕೋಟಿ ಕೋಟಿ ದೂರದಿಂದ
ಹೊಂಬಿಸಿಲಿದು ಬಂದಿದೆ;
ಸೂರ್ಯದೇವನಿಂದ, ಕಂದ
ಚುಂಬನವನು ತಂದಿದೆ !
ಪೂರ್ವದುದಯ ಗಿರಿಯನೇರಿ
ಕಂದರಗಳ ನಿರದೆ ಹಾರಿ,
ಸಾಂದ್ರವಿಪಿನಗಳನು ತೂರಿ
ಹಸುಳೆ ಬಿಸಿಲು ಬಂದಿದೆ;
ಕಂದ, ಮಿಹಿರದೇವನಿಂದ,
ಮಿಸುನಿ ಕೃಪೆಯ ತಂದಿದೆ.

ಎಂದು ರಾಗವಾಗಿ ಹೇಳುತ್ತಾ ತಮ್ಮ ಕೋಟನ್ನು ತೆಗೆದು ಅವರು ಮಲಗುವ ಮಂಚದಮೇಲೆ ಇಟ್ಟು, ಪಕ್ಕದಲ್ಲಿ ಇದ್ದ ದೇವರಮನೆಗೆ ಹೋಗಿ ಅಲ್ಲಿಯೂ ಕಿಟಕಿ ತೆರೆದು ಬಿಸಿಲು ಬೀಳುವಂತೆ ಮಾಡುತ್ತಿದ್ದರು. ನಂತರ ಬಂದು ಕಾಫಿಗೆ ಹೋಗಲು ಮಂಚದ ಮೇಲೆ ಇಟ್ಟಿದ್ದ ಟವೆಲ್ಲನ್ನು ತೆಗೆದುಕೊಳ್ಳುವಾಗ ನಾನು ಎಚ್ಚರಗೊಂಡೆನೇ ಎಂದು ಗಮನಿಸಿ ಹಾಗೆಯೇ ಮಲಗಿದ್ದರೆ 'ಏನು ಬೆಚ್ಚನೆ ಮಲಗಿರುವೆಯಾ ಏಳುವುದಿಲ್ಲವೇ? ಏಳಮ್ಮ ಏಳು ಓ ತಾಯಿ ಕುಂಡಲಿನಿ, ಏಳು ಆನಂದಮಯಿ ಏಳು ಬ್ರಹ್ಮಾನಂದಮಯಿ' ಎಂದು ಹಾಡಿ ಎಚ್ಚರಿಸುತ್ತಿದ್ದರು.

('ಮಗಳು ಕಂಡ ಕುವೆಂಪು' – ಪು. 26–27)

ಕುವೆಂಪುರವರ ಹಿರಿಯಮಗ ತೇಜಸ್ವಿಯವರು ಸ್ವತಂತ್ರ ಬದುಕಿನ ಹಂಬಲಿಗರು. ಬಹು ಚಿಕ್ಕವಯಸ್ಸಿಗೇ ಅವರು ಮೈಸೂರನ್ನು ತೊರೆದು ಸ್ವಂತ ತೋಟ ಮಾಡಲು ದೂರದ ಮಲೆನಾಡಿಗೆ ಬಂದುಬಿಡುತ್ತಾರೆ. ತೇಜಸ್ವಿಯವರ ತಮ್ಮ ಚೈತ್ರ, ಆಸ್ಟ್ರೇಲಿಯಾಕ್ಕೆ ಉದ್ಯೋಗ ನಿಮಿತ್ತ ತೆರಳಿ ಅಲ್ಲೇ ನೆಲೆಸುತ್ತಾರೆ. ತೇಜಸ್ವಿಯವರ ದೊಡ್ಡ ತಂಗಿ ಇಂದುಕಲಾ ಮದುವೆಯಾಗಿ ಬಹುಕಾಲ ವಿದೇಶದಲ್ಲಿ ನೆಲಸಿ ಹಿಂದುರಿಗಿದ ಮೇಲೂ ಪತಿಯೊಂದಿಗೆ ದೂರದಲ್ಲೇ ಇದ್ದವರು. ಮನೆಯ ಕಿರಿಮಗಳಾದ

ಕಾದಂಬರಿಯ ವಿಚಾರ ಕೆಲವು ಸಲ ಅಪ್ಪ ಏನಾದರೂ ಮಾತಾಡಿದಾಗ ಅಮ್ಮ ಸ್ಪಂದಿಸುತ್ತಿದ್ದುದು ಕೇಳಿರುವೆ. ಒಂದು ದಿನ ಅಪ್ಪ ಮಧ್ಯಾಹ್ನದ ಕಾಫಿ ತೆಗೆದುಕೊಳ್ಳಲು ಪ್ರತಿದಿನ ಬರುವಂತೆ ನಾಲ್ಕು ಘಂಟೆಯ ಸಮಯಕ್ಕೆ ಬರಲಿಲ್ಲ. ಅಮ್ಮ ಸ್ವಲ್ಪಹೊತ್ತು ಕಾದರು. ಅನಂತರ ಬಂದು ಹಾಲ್‌ನಲ್ಲಿ ಕಿಟಕಿ ಬಳಿ ನಿಂತು ತಂದೆಯವರ ಓದುವ ಕೊಠಡಿ ಕಡೆ ನೋಡಿದರು. ತಂದೆಯವರು ಓದುವ ಕೊಠಡಿ ಬಾಗಿಲು ತೆಗೆದು ಕುಳಿತರೆ ಹಾಲ್ ಕಿಟಕಿಯಿಂದ ಕಾಣುತ್ತಿತ್ತು. ತಾಯಿಯವರು ನೋಡಿದಾಗ ತಂದೆಯವರು ಬರವಣಿಗೆಯಲ್ಲಿ ಮಗ್ನರಾಗಿದ್ದರು. ಅಮ್ಮ ಬಂದು ಹಾಲ್‌ನಲ್ಲಿ ಕುಳಿತು ಹೂಕಟ್ಟಲು ಪ್ರಾರಂಭಿಸಿದರು. ಸ್ವಲ್ಪ ಸಮಯದ ಮೇಲೆ ತಂದೆಯವರು ಎದ್ದು ಬಂದು ವರಾಂಡದಲ್ಲಿ ತಮ್ಮ ಚಪ್ಪಲಿ ಹಾಕಿಕೊಳ್ಳಲು ಹಾಲ್‌ನ ಕಿಟಕಿ ಹತ್ತಿರ ನಿಂತಾಗ ಚಪ್ಪಲಿ ಸದ್ದಿಗೆ ಅಮ್ಮ ತಿರುಗಿದಾಗ ಕಿಟಕಿಯಲ್ಲಿ ಅಪ್ಪ ನಿಂತಿದ್ದಾರೆ. 'ಏನು ಕಾಫಿಗೆ ಬರುವುದಿಲ್ಲವೇ?' ಎಂದರು. ತಂದೆಯವರು ಕಿಟಕಿ ಹತ್ತಿರವೆ ನಿಂತು 'ತಾಳು ತಾಳು ಚಿನ್ನಮ್ಮ ತಪ್ಪಿಸಿಕೊಂಡು ಹೋಗಿರಬೇಕು ಹಂಡೆ ಸದ್ದಾಗುತ್ತಿದೆ' ಎಂದರು. ಅಮ್ಮ 'ಚಿನ್ನಮ್ಮಗೆ ಏನೂ ತೊಂದರೆಯಿಲ್ಲ, ತಪ್ಪಿಸಿಕೊಂಡು ಹೋಗುವಳು. ನೀವು ಬಂದು ಕಾಫಿ ಕುಡಿದು ಹೋಗಿ' ಎಂದರು. ಚಿನ್ನಮ್ಮ ತಪ್ಪಿಸಿಕೊಂಡು ಹೋದಮೇಲೆ ಬರುವೆ ಎಂದು ನಗುತ್ತಾ ತಂದೆಯವರು ಮೆಟ್ಟಲಿಳಿದು ಉದ್ಯಾನಕ್ಕೆ ಹೋದರು. ಸ್ವಲ್ಪ ಹೊತ್ತು ಓಡಾಡಿ ಮತ್ತೆ ಬಂದು ಬರವಣಿಗೆಯಲ್ಲಿ ತೊಡಗಿದರು. ಅರ್ಧ ಘಂಟೆ ಬರೆದ ಮೇಲೆ ಕಾಫಿ ಕುಡಿಯಲು ಬಂದರು. 'ಚಿನ್ನಮ್ಮ ತಪ್ಪಿಸಿಕೊಂಡು ಹೋದಳೆ?' ಎಂದು ಅಮ್ಮ ನಗುತ್ತಾ ಕೇಳಿದಾಗ; 'ಹ್ಞೂ, ಅವಳು ಕ್ಷೇಮವಾಗಿ ಹುಲಿಕಲ್ಲು ನೆತ್ತಿ ಹತ್ತಿದಳು' ಎಂದರು ಅಪ್ಪ. ಬಹುಶಃ ಅಮ್ಮ ರಾತ್ರಿ ಮಲಗುವ ಮೊದಲು ತಂದೆಯವರು ಬರೆದು ಅವರ ಮೇಜಿನಮೇಲೆ ಇಟ್ಟಿರುವುದನ್ನು ಓದುತ್ತಿದ್ದರು, ಕೆಲವು ಸಾರಿ ಅದು ನನ್ನ ಗಮನಕ್ಕೂ ಬಂದಿತ್ತು. ಹಾಗಾಗಿ ತಂದೆಯವರು ಹೇಳಿದಾಗ ತಾಯಿಯವರ ಪ್ರತಿಕ್ರಿಯೆ ಇರುತ್ತಿತ್ತು. ಹಾಗೆಯೇ ಇನ್ನೊಂದು ದಿನ 'ಅಂತಕ್ಕನ ಮಗಳು ಕಾವೇರಿಯ ದುರಂತ ಸಾವನ್ನು ಎಷ್ಟು ತಪ್ಪಿಸಲು ಪ್ರಯತ್ನಿಸಿದರೂ ಆಗಲಿಲ್ಲ. ವಿಧಿ ಅವಳನ್ನೂ ದುರಂತ ಸಾವಿಗೆ ನೂಕಿತು' ಎಂದು ಅಮ್ಮನ ಹತ್ತಿರ ಹೇಳುತ್ತಿದ್ದರು..........

('ಮಗಳು ಕಂಡ ಕುವೆಂಪು' – ಪು. 148–149)

ತಾರಿಣಿಯವರು ಮದುವೆಗೆ ಮುನ್ನ ಮತ್ತು ನಂತರವೂ– ನಡುವಿನ ಕೆಲವೇ ವರ್ಷಗಳನ್ನು ಬಿಟ್ಟರೆ– ಉದ್ದಕ್ಕೂ ಉದಯರವಿಯ ಸಾಮೀಪ್ಯದಲ್ಲೇ ಇದ್ದವರು. ಉದಯರವಿಯ ಒಂದೊಂದು ಅಂಗುಲವೂ, ಅಲ್ಲಿಯ ಅಂಗಳದ ಒಂದೊಂದು ಹೂಗಿಡವೂ, ಉದಯರವಿಯೊಳಗೆ ಘಟಿಸಿದ ಒಂದೊಂದು ಘಟನೆಯೂ ತಾರಿಣಿಯವರ ಮನಃಪಟಲದಲ್ಲಿ ಕೊರೆದಂತೆ ಕೂತಿವೆ.

ಕುವೆಂಪುರವರು ಮೈಸೂರು ವಿ.ವಿಯ ವೈಸ್ ಚಾನ್ಸಲರಾಗಿದ್ದಾಗ ಬಹು ದೊಡ್ಡ ಬಂಗಲೆಯನ್ನೇ ಅವರ ವಾಸಕ್ಕೆ ಕೊಡಲಾಗಿತ್ತಂತೆ. ಆದರೆ ಉದಯರವಿಯನ್ನು ಆತ್ಮೀಯವಾಗಿ ಹಚ್ಚಿಕೊಂಡಿದ್ದ ಕುವೆಂಪು ಆ ಬಂಗಲೆಗೆ ಹೋಗಲೇ ಇಲ್ಲವಂತೆ. ಈ ಬಗ್ಗೆ ತೇಜಸ್ವಿ ಮತ್ತು ತಾರಿಣಿ ಈರ್ವರೂ ಬರೆಯುತ್ತಾರೆ. ಹೇಗೆ ಕುವೆಂಪು 'ಉದಯರವಿ'ಯನ್ನು ತಮ್ಮ ಭಾವಕೋಶಕ್ಕೆ ಬೆಸೆದುಕೊಂಡಿದ್ದರೋ ಬಹುಶಃ ಹಾಗೆಯೇ ಮತ್ತು ಅದಕ್ಕೂ ತುಸುಮಿಗಿಲಾಗಿ ತಾರಿಣಿಯವರು 'ಉದಯರವಿ'ಯನ್ನು ತಮ್ಮ ಅಂತಃಕರಣಕ್ಕೆ ಬೆಸೆದುಕೊಂಡಿದ್ದಾರೆ. ತಾರಿಣಿಯವರು ಚಿಕ್ಕವರಿರುವಾಗಲೇ ಕುವೆಂಪು ನಿವೃತ್ತರಾಗಿ ಮನೆ ಸೇರುತ್ತಾರೆ. ಅಲ್ಲಿಂದ ಮುಂದೆ 'ಮಲೆಗಳಲ್ಲಿ ಮದುಮಗಳು', 'ನೆನಪಿನ ದೋಣಿ' ಈ ಎರಡೂ ಬೃಹತ್ ರಚನೆಗಳಲ್ಲಿ ತೊಡಗುವ ಕುವೆಂಪುರವರ ಹಸ್ತಪ್ರತಿಗಳನ್ನು ಶುದ್ಧಪ್ರತಿ ಮಾಡುವುದು, ಬೇರೆ ಪುಸ್ತಕಗಳಿಗೆ ಬಂದ ಬೇಡಿಕೆಗನುಸಾರ ಪುಸ್ತಕಗಳನ್ನು ಅಟ್ಟದಿಂದಿಳಿಸಿ ಭಾಂಗು ಕಟ್ಟುವುದು, ಬಿಲ್ಲು ತಯಾರಿಸುವುದು, ಹೊಸ ಪುಸ್ತಕಗಳು ಮುದ್ರಿತವಾಗಿ ಬಂದಾಗ ಅವುಗಳ ಜೋಡಣೆ, ಸಂರಕ್ಷಣೆ, ಈ ಎಲ್ಲ ಕೆಲಸಗಳೂ ತಾರಿಣಿಯವರದೇ. ಇನ್ನುಳಿದ ಮೂವರಿಗಿಂತ ಕುವೆಂಪು ರವರನ್ನು ಅತಿ ಹತ್ತಿರದಿಂದ ಲಾಲಿಸಿದ್ದು, ಪಾಲಿಸಿದ್ದು ತಾರಿಣಿಯವರೇ. ಪತ್ನಿ ಹೇಮಾವತಿಯವರು ತೀರಿಕೊಂಡ ಮೇಲೆ ಕುವೆಂಪುರವರ ಬರವಣಿಗೆಯೇ ನಿಂತುಹೋಯಿತು. ಹೇಮಾವತಿಯವರ ದೇಹಾಂತ ವಾದದ್ದು 1982ರಲ್ಲಿ. ಅಲ್ಲಿಂದ ಮುಂದೆ 1994ರಲ್ಲಿ ಕುವೆಂಪು ದೇಹಾಂತವಾಗುವವರೆಗಿನ 12 ವರ್ಷಗಳ ಕಾಲ ಅವರನ್ನು ಮಗುವಿನಂತೆ ಕಾಪಾಡಿದ್ದು ತಾರಿಣಿಯವರೇ. ಪುಸ್ತಕದ ಅಧ್ಯಾಯ 73ರಲ್ಲಿ ಒಂದು ವಿವರವಿದೆ. ಹೇಮಾವತಿಯವರ ನಿಧನದ ನಂತರ ಕ್ರಮೇಣವಾಗಿ ಐಹಿಕ ಜೀವನದಿಂದ ಮನಸ್ಸನ್ನು ಹಿಂತೆಗೆದುಕೊಂಡಂತಿದ್ದ ಕುವೆಂಪುರವರನ್ನು ತಾರಿಣಿ ಪ್ರಶ್ನಿಸುತ್ತಾರೆ 'ಏಕಣ್ಣಾ ಈಗೀಗ ಏನೂ ಮಾತಾಡುವುದೇ ಇಲ್ಲ' – ಕುವೆಂಪು ಉತ್ತರ 'ಮಾತಾಡುತ್ತೀನಲ್ಲಾ, ನಿನಗೆ ಎಲ್ಲಾ ಗೊತ್ತಾಗುತ್ತದಲ್ಲಾ'. ಟೆಲಿಪತಿಯಂತೆ ಮನಸ್ಸಿನಿಂದಲೇ ನನಗೆ ಗೊತ್ತಾಗುವಂತೆ ಮಾಡುತ್ತಿದ್ದರೇ? ಅವರು ಮಾತಾಡದಿದ್ದರೂ ಅವರಿಗೆ ಬೇಕಾದುದೆಲ್ಲ ನನ್ನ ಮನಸ್ಸಿಗೆ ಹೊಳೆಯುತ್ತಿತ್ತು! ಎಂದು ತಾರಿಣಿ ಬರೆಯುತ್ತಾರೆ. ಹೀಗೆ ಮನಸ್ಸನ್ನೋದುವ ಕೆಲಸ ಸಾಧ್ಯವಾಗುವುದು ಪರಸ್ಪರದಲ್ಲಿ ಬೆಳೆಯುವ ವಾತ್ಸಲ್ಯದಿಂದ ಮಾತ್ರ!

ಇಂತಹುದೇ ನೂರಾರು, ನೂರಾರು ಸಣ್ಣಪುಟ್ಟ ಸಂದರ್ಭಗಳ, ಮಾತುಕತೆಗಳ, ಪ್ರಯಾಣಗಳ, ಮನೆಯ ಸಡಗರಗಳ ದಟ್ಟ ವಿವರಗಳಿಂದ ಈ ಪುಸ್ತಕ ತುಂಬಿಹೋಗಿದೆ. ತೇಜಸ್ವಿಯವರ 'ಅಣ್ಣನ ನೆನಪು' ಹೊರಾಂಗಣದ ಕಥನವಾದರೆ, ತಾರಿಣಿಯವರ ಪುಸ್ತಕ ಒಳಾಂಗಣದ ಕುಸುರಿ ಕೆಲಸ. ಇಲ್ಲಿ ಸುಮಾರು 1957ರಿಂದ ತೊಡಗಿ 1994ರವರೆಗೆ ಅಂದರೆ ಸರಿಸುಮಾರು 35 ವರ್ಷಗಳ 'ಉದಯರವಿ'ಯ ನಾಡಿಮಿಡಿತವೇ ಅಚ್ಚಾಗಿ ಬಿಟ್ಟಿದೆ. ಕಲಾ ಮತ್ತು ತಾರಿಣಿ ಹುಟ್ಟಿದ ಸಂಭ್ರಮದಿಂದಾರಂಭಿಸಿ, ಆ ಮನೆಗೆ ಮೊದಲ ಮೊಮ್ಮಗಳ ಆಗಮನವನ್ನು ವಿವರಿಸುವ, ಮುಂದೆ ಆ ಮೊಮ್ಮಕ್ಕಳ ಬೆಳವಣಿಗೆಯನ್ನು ಅಲ್ಲಲ್ಲೇ ಮಿಂಚಿಸಿ ಹೊಳೆಸುವ ಈ ಪುಸ್ತಕ ಹದಿನಾರಾಣೆ ಹೆಣ್ಣುಮಗಳೊಬ್ಬಳು ಕಂಡ ಮಹಾಕವಿಯ ಬದುಕು! ತೇಜಸ್ವಿಯವರಿಗೆ ಕುವೆಂಪು ಎಂಬುದು ತಮ್ಮ ನೆನಪಿನ ಮಾಲನ್ನು ಸುತ್ತಿಕೊಳ್ಳುವ ಆಧಾರವಾಗುವ ರಾಟೆಯಾದರೆ ತಾರಿಣಿಯವರಿಗೆ ಕುವೆಂಪು ಎಂಬುದು ನೆನಪಿನ ಕಸೂತಿಯನ್ನು ಹೆಣೆಯುವ ನೂಲು! ಆದರೆ ರಾಟೆಯಾಗಲೀ, ನೂಲಾಗಲೀ, ಎಲ್ಲೂ ಹೆಬ್ಬುಬ್ಬೆಯ ಮಾತಿಲ್ಲ. ತಮ್ಮ ಇಂದ್ರಿಯ ಗ್ರಾಹ್ಯವಾಗದ ಯಾವುದೊಂದನ್ನು ಈ ಅಣ್ಣ ತಂಗಿಯರು ವಿವರಿಸುವುದಿಲ್ಲ. ಅವರ ಕಣ್ಣು ಏನು ಕಂಡಿತೋ, ಕಿವಿಗಳು ಏನು ಕೇಳಿತೋ, ಮನಸ್ಸು ಏನನ್ನು ಗ್ರಹಿಸಿತೋ ಅದೇ ಕುವೆಂಪು. ಅದಕ್ಕೆ ಮೀರಿದ ಅತೀಂದ್ರಿಯ ವೈಭವೀಕರಣದ ಒಂದೇ ಒಂದು ಸೊಲ್ಲು ಇಡೀ ಪುಸ್ತಕದಲ್ಲಿ ಹುಡುಕಿದರೂ ಸಿಗದು. ಹೀಗಾಗಿಯೇ ನಮಗೆ ರಕ್ತ, ಮಾಂಸ, ಮಜ್ಜೆ, ಜೀರ್ಣಾಂಗ, ಶ್ವಾಸಾಂಗ ಎಲ್ಲವೂ ಇರುವ ಈ ನೆಲದ ಮನುಷ್ಯ ಕುವೆಂಪು ಇಲ್ಲಿ ಸಿಕ್ಕುತ್ತಾರೆ.


ಮೀನಿನ ಸಾರು, ಅಕ್ಕಿರೊಟ್ಟಿ, ಕೋಳಿಮಾಂಸಗಳನ್ನು ಸವಿದು

ಆತಂಕದ ಸಂಜೆ

ನಾನು ಗಂಗೋತ್ರಿ ಸಂಗೀತ ಕಾಲೇಜಿನಲ್ಲಿ ಓದುತ್ತಿದ್ದೆ. ಕೊನೆಯ ಸ್ನಾತಕೋತ್ತರ ಪದವಿಯಲ್ಲಿದ್ದೆ. ಮನೆಯಲ್ಲಿ ಇನ್ನಾರೂ ಮಕ್ಕಳು ಇರಲಿಲ್ಲ. ನಾನು ಅಪ್ಪ ಅಮ್ಮ ಮೂವರೆ ಇದ್ದದ್ದು. ನನ್ನ ಪರೀಕ್ಷೆ ಹತ್ತಿರ ಬರುತ್ತಿತ್ತು. ಮುಂದೆ ಓದು ಮುಗಿಸಿ ಹೊರಬರುತ್ತಿದ್ದೆವು. ನಮ್ಮ ಉಪಾಧ್ಯಾಯರುಗಳು ನಮಗೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಿದ್ದರು. ಸಂಜೆ ಆರುಗಂಟೆವರೆಗೆ ನಡೆಯಬಹುದೆಂದು ಮೊದಲೆ ತಿಳಿಸಿದ್ದರು. ನಾನು ಮನೆಯಲ್ಲಿ ಅಮ್ಮನಿಗೆ ಎಲ್ಲ ವಿಚಾರ ಹೇಳಿ ಬಂದಿದ್ದೆ. ಕಾಲೇಜಿನಲ್ಲಿ ಕಾರ್ಯಕ್ರಮ ನಿಧಾನವಾಗಿ ಪ್ರಾರಂಭವಾಗಿ, ಮುಗಿಯಲು ತಡವಾಗಿ ಏಳು ಗಂಟೆಯಾಗಿತ್ತು.

ತಂದೆಯವರು ಮನೆಯಲ್ಲಿ ಕತ್ತಲಾಗುತ್ತಿದ್ದಂತೆ ತಾರಿಣಿ ಬರಲಿಲ್ಲ ಎಂದು ಕಾತರವಾದರಂತೆ. ಅಮ್ಮ ಕಾರ್ಯಕ್ರಮವಿದೆ ಎಂದು ಹೇಳಿದ್ದಾಳೆ ಎಂದರು. ಆದರೂ ಅವರಿಗೆ ಸಮಾಧಾನವಿಲ್ಲ. ಕತ್ತಲಾಗುತ್ತಿದೆ ಗಂಗೋತ್ರಿಯಲ್ಲಿ ಬಸ್ಸು ಸರಿಯಾಗಿ ಸಿಗುವುದಿಲ್ಲ. ತೊಂದರೆಯಾಗುವುದು ಎಂದು ಹತ್ತು ನಿಮಿಷಕ್ಕೊಮ್ಮೆ ಮನೆಗೇಟು ತೆರೆದು ಬೀದಿಕಡೆ ನೋಡುತ್ತಿದ್ದರಂತೆ. ಏಳುಗಂಟೆಯಾಗಿದ್ದೇ ನಾನೇ ಕಾರು ತೆಗೆದುಕೊಂಡುಹೋಗಿ ನೋಡಿ ಬರುತ್ತೇನೆ ಎಂದು ಹೊರಟರಂತೆ. ತಾಯಿಯವರು 'ಬೇಡ ಸ್ನೇಹಿತೆಯರು ಇದ್ದಾರೆ. ಒಟ್ಟಾಗಿ ಬರುವರು' ಎಂದು ಹೇಳಿದರೂ ಕೇಳದೆ ಕಾರು ಹೊರತೆಗೆದು ಹೊರಟರಂತೆ.

ನಮ್ಮ ಕಾರ್ಯಕ್ರಮ ಮುಗಿದು ನಾವೆಲ್ಲಾ ಹೊರಬಂದು ಬಸ್ ನಿಲ್ದಾಣದ ಕಡೆ ಹೊರಟಿದ್ದೆವು. ಅಷ್ಟರಲ್ಲಿ ನೋಡುತ್ತೇನೆ ದೂರದಲ್ಲಿ ದೊಡ್ಡ ಕಾರೊಂದು ಬರುತ್ತಿದೆ. ನಮ್ಮ ಕಾರಿನ ಹಾರನ್‌ತರ ಕೇಳುತ್ತಿದೆ. ಹತ್ತಿರ ಬಂದಾಗ ನೋಡಿದರೆ ಅದು ನಮ್ಮ ಕಾರೇ. ನಾವು ಕಾಲೇಜಿನಿಂದ ಸ್ವಲ್ಪದೂರ ನಡೆದು ರಸ್ತೆಗೆ ಬಂದಿದ್ದೆವು. ಕಾರು ಕಾಲೇಜಿನ ಹತ್ತಿರ ಹೋಗಿ ನಿಂತಿತು. ಕತ್ತಲೆಯಾಗಿದ್ದರಿಂದ ತಂದೆಯವರಿಗೆ ನಾನು ಕಂಡಿಲ್ಲ. ನಾನು ರಸ್ತೆಗೆ ಬಂದವಳು ಮತ್ತೆ ಹಿಂದಕ್ಕೆ ತಿರುಗಿ ಕಾರಿನಕಡೆಗೆ ಹೊರಟೆ. ಅಷ್ಟರಲ್ಲಿ ಕಾಲೇಜಿನ ಹತ್ತಿರವಿದ್ದ ಹುಡುಗಿಯರು ನನ್ನನ್ನು ಕರೆಯುತ್ತಿದ್ದರು. ಕಾರಿನ ಸುತ್ತ ಎಲ್ಲರೂ ಮುತ್ತಿಕೊಂಡಿದ್ದರು. ನಮ್ಮ ಪ್ರಿನ್ಸಿಪಾಲರು ಕುವೆಂಪು ಬಂದರೆಂದು ಓಡಿಬಂದು ನಮಸ್ಕಾರ ಹೇಳಿ, 'ಕ್ಷಮಿಸಿ ಸಾರ್ ಕ್ಷಮಿಸಿ, ಸ್ವಲ್ಪ ಹೊತ್ತಾಯಿತು' ಎನ್ನುತ್ತಿದ್ದರು. ತಂದೆಯವರು 'ಎಲ್ಲಿ ಹೋದಳು ತಾರಿಣಿ? ಇಷ್ಟು ಹೊತ್ತಾಯಿತು ಇನ್ನೂ ಮನೆಗೆ ಬರಲಿಲ್ಲ' ಎನ್ನುತ್ತಿದ್ದರು. ಕಾಲೇಜಿನ ಉಪಾಧ್ಯಾಯರೆಲ್ಲ ಕಾರಿನ ಸುತ್ತ ನಿಂತು ತಂದೆಯವರಿಗೆ ವಿವರಣೆ ಕೊಡುತ್ತಿದ್ದರು. ನಾನು ಬಂದಾಗ ಮೇಷ್ಟುಗಳು 'ಬಾಮ್ಮಾ ಬೇಗ ಕಾರು ಹತ್ತು' ಎಂದು ಬಾಗಿಲುತೆರೆದು ನಿಂತರು. ನಾನು ತಂದೆಯವರ ಕಣ್ಣಿಗೆ ಬಿದ್ದಿದ್ದೇ 'ಏನಕ್ಕಾ ಇಷ್ಟು ತಡಮಾಡಿದೆ? ಎಷ್ಟು ಗಾಬರಿಯಾಯಿತು, ಸರಿಯಾಗಿ ಹೇಳಿ ಹೋಗಬಾರದೆ?' ಎಂದರು. ನಾನು ಏನೂ ಮಾತಾಡಲಿಲ್ಲ. ಸುತ್ತಮುತ್ತ ಮೇಷ್ಟುಗಳು ಇದ್ದು, ತಂದೆಯವರ ಗಾಬರಿ ನೋಡಿ ನನಗೆ ಸಂಕೋಚವಾಗಿತ್ತು. ಮನೆ ಹತ್ತಿರದ ಸ್ನೇಹಿತೆಯರನ್ನೂ ಕರೆದು ಹಿಂದಿನ ಸೀಟಿಗೆ ಹತ್ತಿಸಿ, ನಾನು ಮುಂದೆ ಕುಳಿತೆ. ಪ್ರಿನ್ಸಿಪಾಲರು 'ಇಲ್ಲ ಸಾರ್ ನಾವೇ ಸ್ವಲ್ಪ ತಡಮಾಡಿದ್ದು. ಬೇಗ ಮುಗಿಸಬೇಕಿತ್ತು' ಎಂದು ವಿನಂತಿಸಿದರು. 'ಏನಮ್ಮಾ ಸರಿಯಾಗಿ ಮನೆಯಲ್ಲಿ ಹೇಳಿ ಬರಬಾರದಿತ್ತೇ? ನೀವೇನೂ ಯೋಚನೆ ಮಾಡಬೇಡಿ ಸಾರ್. ಹೊತ್ತಾದರೆ ನಾವೇ ಬಂದು ಮನೆ ತಲುಪಿಸುತ್ತಿದ್ದೆವು' ಎಂದು ನಾಲ್ಕು ಸಮಾಧಾನದ ಮಾತನ್ನು ಹೇಳಿದರು. ನಾನು 'ಇದೇನು ಅಮ್ಮನಿಗೆ ಎಲ್ಲಾ ಹೇಳಿ ಬಂದಿದ್ದೆ ಆದರೂ ಅಣ್ಣ ಗಾಬರಿಯಾಗಿರುವರಲ್ಲಾ' ಎಂದು ಯೋಚಿಸುತ್ತಾ ಕುಳಿತಿದ್ದೆ. ಕಾರು ಒಂಟಿಕೊಪ್ಪಲಿಗೆ ಬಂದಾಗ ಸ್ನೇಹಿತೆಯರನ್ನು ಅವರವರ ಮನೆದಾರಿಯಲ್ಲಿ ಇಳಿಸಲು ತಂದೆಯವರಿಗೆ ದಾರಿ ತೋರಿಸಿದೆ. ಎಲ್ಲರೂ ಅವರವರ ಮನೆದಾರಿಯಲ್ಲಿ ಇಳಿದು ಹೋದರು. ನಾನು ಅಪ್ಪ ಮನೆಗೆ ಬಂದೆವು.



ಮನೆ ಸೇರಿದ ಮೇಲೆ ಅಮ್ಮನ ಹತ್ತಿರ ತಗಾದೆ ಮಾಡಿದೆ. 'ನಾನು ನಿನ್ನ ಹತ್ತಿರ ಎಲ್ಲಾ ಹೇಳಿ ಹೋದೆನಲ್ಲಾ? ಅಣ್ಣ ಏತಕ್ಕೆ ಕಾರು ತೆಗೆದುಕೊಂಡು ಬಂದರು. ನಮ್ಮ ಪ್ರಿನ್ಸಿಪಾಲ್ ಬಳಿ ನಾನು ಮನೆಯಲ್ಲಿ ಸರಿಯಾಗಿ ಹೇಳಿ ಬಂದಿಲ್ಲ ಎಂದರು. ಮೇಷ್ಟುಗಳು ಏನು ತಿಳಿದುಕೊಳ್ಳುವರು?' ಎಂದೆ. ಅಮ್ಮ, 'ನಾನು ನಿಮ್ಮ ಅಣ್ಣನಿಗೆ ಎಲ್ಲಾ ಹೇಳಿದೆ ಅವರು ಕೇಳಲಿಲ್ಲ. ಬಸ್ ಸಿಗುತ್ತದೋ ಇಲ್ಲವೋ, ಕತ್ತಲಾಯಿತು ಎಂದು ಕಾರು ತೆಗೆದುಕೊಂಡು ಹೊರಟೇಬಿಟ್ಟರು ನಾನೇನು ಮಾಡಲಿ?' ಎಂದರು. ಅಲ್ಲಿಂದ ನಾನು ತಂದೆಯವರಲ್ಲಿಗೆ ಹೋಗಿ 'ಅಮ್ಮ ಹೇಳಿದರೂ ಏಕೆ ಗಾಬರಿಯಾದಿರಿ? ನನ್ನ ಸ್ನೇಹಿತೆಯರೂ ಇದ್ದರು. ಒಟ್ಟಿಗೆ ಬರುತ್ತಿದ್ದೆವು' ಎಂದೆನು. 'ನೀನು ಯಾವಾಗಲೂ ಬಸ್ ಸಿಗುವುದಿಲ್ಲ ಎಂದು ಗೊಣಗುತ್ತಾ ನಡೆದು ಬರುವೆಯಲ್ಲಾ ಅದಕ್ಕೆ ಕಾರು ತಂದೆ' ಎಂದು ಹೇಳಿ (ಸಧ್ಯ ಇವಳನ್ನು ಮನೆಗೆ ಕರೆತಂದು ರಸ್ತೆ ನೋಡುವ ತೊಂದರೆ ತಪ್ಪಿತು. ಮನಸ್ಸೆಲ್ಲಾ ಹಗುರವಾಯಿತು ಎಂಬಂತೆ) ನನ್ನ ಉಳಿದ ತಕರಾರುಗಳನ್ನು ಮನಸ್ಸಿಗೆ ತೆಗೆದುಕೊಳ್ಳದೆ, ಹಗುರವಾಗಿ ನಗುತ್ತಾ ಆರಾಮವಾಗಿ ಕುಳಿತರು.

ತಂದೆಯವರ ಗಡಿಬಿಡಿ, ಉದ್ವೇಗ, ಕಾತರ, ಈ ಸ್ವಭಾವದಿಂದ ನಾನು ಅಕ್ಕ ಯಾವಾಗಲೂ ಸಂಜೆ ಐದೂವರೆ, ಆರುಗಂಟೆ ಒಳಗೆ ಮನೆಯಲ್ಲಿರುತ್ತಿದ್ದೆವು. ಹೊತ್ತಾಗುವಂತಹ ಯಾವ ಕಾರ್ಯಕ್ರಮಕ್ಕೂ ಹೋಗುತ್ತಲೇ ಇರಲಿಲ್ಲ.

('ಮಗಳು ಕಂಡ ಕುವೆಂಪು' – ಪು. 125–126)

ಚಪ್ಪರಿಸುವ, ಬೇಳೆ ಹೋಳಿಗೆ ತುಪ್ಪವನ್ನು ಸಖತ್ತಾಗಿ ಹೊಡೆಯುವ, ಉದ್ದಿನ ವಡೆಯನ್ನು ತಿಂದು ಸುಖಿಸುವ ಕುವೆಂಪು ಬೇಕೇ – ತಾರಿಣಿಯವರನ್ನು ಓದಿ ಅಲ್ಲಿ ನಿಮಗವರು ದೊರೆಯುತ್ತಾರೆ! ಹೆಂಡತಿಗೆ ಕೊಟ್ಟಿಗೆಯಲ್ಲಿ, ಅಡುಗೆ ಮನೆಯಲ್ಲಿ, ಇಲಿಬೇಟೆಯಲ್ಲಿ, ತರಕಾರಿಪೇಟೆಯಲ್ಲಿ, ಕೈತೋಟದಲ್ಲಿ ನೆರವಾಗುವ ಗಂಡ ಕುವೆಂಪುವನ್ನು ನೋಡಬೇಕೇ? – ತಾರಿಣಿಯವರನ್ನ ಓದಿ. ಮಗಳು ಕಾಲೇಜಿಂದ ಬರುವುದು ತಡವಾದಾಗ ಒಳಗೂ ಹೊರಗೂ ಶತಪಥವಿಕ್ಕುವ ತಂದೆ, ಮಗಳು ಮನೆಯ ಕದಗಳಿಗೆ ಕಸೂತಿಯ ಕರ್ಟನ್ನುಗಳನ್ನು ಹೊದಿಸಿದಾಗ ಬಂದವರ ಮುಂದೆ ಮಗಳ ಕಲೆಯನ್ನು ಹೊಗಳುವ ಟಿಪಿಕಲ್ ತಂದೆ, ಮಕ್ಕಳನ್ನು ಬುತ್ತಿ ಸಮೇತ ಹೊರಸಂಚಾರಕ್ಕೆ ಕರೆದೊಯ್ದು ಅಲ್ಲಿ ಅವರು ಎಲ್ಲಿ ಬಿದ್ದಾರೋ ಎಲ್ಲಿ ಎಡವಿಯಾರೋ ಎಂದ ಆತಂಕಿಸುವ ತಂದೆ, ಹೆಣ್ಣುಮಕ್ಕಳಿಗೆ ಸಂಗೀತ, ಗಂಡುಹುಡುಗರಿಗೆ ಬೇಟೆ ಕಲಿಸುವ ಸಾಂಪ್ರದಾಯಿಕ ತಂದೆಯಾಗಿ ನೀವು ಕುವೆಂಪುವನ್ನು ಕಾಣಬೇಕೇ?– ಇಲ್ಲಿ ಬನ್ನಿ ಈ ಪುಸ್ತಕಕ್ಕೆ ಮತ್ತು ಮನೆಗೆ ಬರುವ ಕಳ್ಳರಿಗಾಗಿ ನಾನಾ ಜಾಗ್ರತೆವಹಿಸುವ, ತೆಂಗಿನಕಾಯಿ ಪರರ ಪಾಲಾದೀತೆಂದು ರಾತ್ರಿ ಎಚ್ಚರವಾಗಿದ್ದು ಶಬ್ದ ಕೇಳುತ್ತಲೇ ಎದ್ದು ಬಿದ್ದ ಕಾಯಿ ತಂದು ಒಳಗಿಡುವ, ದ್ರಾಕ್ಷಿಗೊಂಚಲನ್ನು ಕಾದು ಹಣ್ಣಾದ ಕೂಡಲೇ ಕೊಯ್ದು ಕಾಪಾಡುವ, ಮನೆಗೆ ಸುಣ್ಣ ಹೊಡೆಸುವ, ರಿಪೇರಿ ಮಾಡಿಸುವ, ಪಾತ್ರೆಗಳಿಗೆ ಕಲಾಯಿ ಹಾಕಿಸುವ, ಜಡ್ಡು ಜಾಪತ್ತುಗಳಿಗೆ ಪರದಾಡುವ ಅಪ್ಪಟ ಗೃಹಸ್ಥ ಕುವೆಂಪು ನಿಮಗಿಲ್ಲಿ ದೊರೆಯುತ್ತಾರೆ. ಮತ್ತೆ ಇಂತಹ ಕುವೆಂಪು ನಿಮಗಿನ್ನೆಲ್ಲಿಯೂ ದೊರೆಯುವುದಿಲ್ಲ. ಅದೇ ಈ ಪುಸ್ತಕದ ಹೆಗ್ಗಳಿಕೆ. ಕುವೆಂಪು ದೇವರ ಕೋಣೆಯಲ್ಲಿ ಕೂತು ತಪಸ್ಸೇ ಮಾಡಿಬಿಡುತ್ತಾರೆ ಎಂಬ ಅತಿರಂಜಿತ ಗುಳ್ಳೆಗಳನ್ನೆಲ್ಲ ಒಡೆದುಹಾಕುತ್ತ ಹಾಕುತ್ತ, ಮಹಾಕವಿಯೊಬ್ಬ ಬದುಕಿನ ಸಣ್ಣ ಸಣ್ಣ ಘಟನೆಗಳಿಂದ, ಸಣ್ಣ ಸಣ್ಣ ಆನಂದಗಳಿಂದ, ಕೌಟುಂಬಿಕ ಬದುಕಿನ ಸಣ್ಣ ವಲಯಗಳಿಂದ ಹೇಗೆ ತನ್ನ ಪುಷ್ಟಿಧಾತುವನ್ನು ಒದಗಿಸಿಕೊಳ್ಳಬಲ್ಲರು ಎಂಬ ಸದಾಕಾಲದ ಸತ್ಯಕ್ಕೆ ಈ ಪುಸ್ತಕ ಸದಾಕಾಲದ ರೆಫರೆನ್ಸ್.

ಈಗಾಗಲೇ ದಂತಕಥೆಯಾಗಿಬಿಟ್ಟಿರುವ ಕುವೆಂಪುರವರ ಬಗ್ಗೆ ತಾರಿಣಿಯವರು ಮತ್ತಷ್ಟು ದಂತಕಥೆಗಳನ್ನು ಸೇರಿಸಿದ್ದರೂ ಯಾರೂ ಪ್ರಶ್ನಿಸುವವರು ಇರಲಿಲ್ಲ. ಅಂತಹ ಪುರಾಣರಡನೆಯ ಎಡಬಲಕ್ಕೂ ತಾರಿಣಿ ಸೋಕುವುದಿಲ್ಲ. ಬಹಳ ನೇರವಾದ, ಸಣ್ಣಸಣ್ಣ ವಾಕ್ಯರಚನೆಯ, ಆಡಂಬರವಿಲ್ಲದ ಭಾಷೆಯ, ಉದ್ವಿಗ್ನತೆಯಿಲ್ಲದ ಶೈಲಿಯ, ರಂಜಕತೆಯ ಸರ್ಕಸ್ಸಿನಿಂದ ದೂರವಾಗಿರುವ ಧೋರಣೆಯ, ತತ್ವಸಿದ್ಧಾಂತಗಳ ಭಾರದಿಂದ ಜಗ್ಗಿ ಜೂಕರಿಸುವ ಅಗತ್ಯವಿಲ್ಲದ, ಗರಿಗರಿ ಹಗುರ ನಡಿಗೆಯ ಈ ಕಥಾನಕ ಸುಪ್ರಸಿದ್ಧ ತಂದೆ–ತಾಯಿಯರ ಬಗ್ಗೆ ಬರೆಯಬಯಸುವ ಮಕ್ಕಳಿಗೊಂದು ಮಾದರಿಯಾಗಿದೆ.

ಕುವೆಂಪುರವರು ಕನ್ನಡ ಸಾಹಿತ್ಯಕ್ಕೆ ಕೊಟ್ಟು ಹೋಗಿರುವ, ಕನ್ನಡ ಸಂಸ್ಕೃತಿಗೆ ಬಿಟ್ಟುಹೋಗಿರುವ, ಒಂದು ದೊಡ್ಡ ಆಸ್ತಿಯೇ ನಮ್ಮ ಮುಂದಿದೆ. ಇಂತಹ ಘನತರವಾದ ಆಸ್ತಿಗೆ ಒಡೆಯನಾದ ಮನುಷ್ಯ ಅದೆಷ್ಟು ಸರಳವಾಗಿ, ಸಂಸಾರವಾದಿಗಳಾಗಿ ಬದುಕಿದ್ದರೆಂಬುದನ್ನು ಅರ್ಥ ಮಾಡಿಕೊಳ್ಳಲು ಮತ್ತು ಉನ್ನತದರ್ಜೆಯ ಬರಹಗಾರ ನಾಗಲು ಏನೇನೋ ಆಗಿರಬೇಕೆಂಬ ಪೊಳ್ಳುಗಳನ್ನೆಲ್ಲ ತಲೆಯಿಂದ ಇಳಿಸಿಹಾಕಲು ಈಗಿನ ಎಲ್ಲ ಯುವಕ ಯುವತಿಯರೂ ಈ ಪುಸ್ತಕವನ್ನು ಓದಬೇಕೆಂದು ನಾನು ಅಂದುಕೊಳ್ಳುತ್ತೇನೆ.

ಈ ಪುಸ್ತಕದ ಕೊನೆಯಲ್ಲಿರುವ ಮೂರು ಅಧ್ಯಾಯಗಳು ಕುವೆಂಪು ಮತ್ತು ಹೇಮಾವತಿಯವರಿಗೆ ಬಹು ಹತ್ತಿರವಾದವರ ನೆನಪಿನಿಂದ ಆಯ್ದ ಭಾಗಗಳಾಗಿವೆ. ಇವು ಈ ದಂಪತಿಯನ್ನು ಪುನರ್ ರೂಪಿಸಿಕೊಳ್ಳುವಲ್ಲಿ ಸಾಹಿತ್ಯ ಚರಿತ್ರಕಾರರಿಗೂ ಇದು ನೆರವಾಗಬಹುದು.

ಕುವೆಂಪುರವರನ್ನೇ ಆಧರಿಸಿದ್ದರೂ, ಸ್ವತಂತ್ರ ಆಲೋಚನೆಗಳನ್ನೂ ಉತ್ತಮವಾಗಿ ಅಭಿವ್ಯಕ್ತಿಸಬಲ್ಲರೆಂಬ ಭರವಸೆಯ ಲೇಖಕಿಯೊಬ್ಬರು ಇಲ್ಲಿ ಹುಟ್ಟಿದ್ದಾರೆ. ತಾರಿಣಿಯವರು ಸ್ವತಂತ್ರ ಕಥಾನಕಗಳನ್ನು ಬರೆಯುವ ಕಡೆಗೆ ಖಂಡಿತಾ ಮನಸ್ಸು ಮಾಡಬೇಕು. ಅವರ ಅನುಭವ ಸಾಮಗ್ರಿ ಹಿರಿದಾಗಿದೆ. ಉದಾತ್ತ ಸಂಸ್ಕಾರವೊಂದರಲ್ಲಿ ಬೆಳೆದ ಅವರ ಮನೋಧರ್ಮ ಅನುಭವಗಳನ್ನು ನಿರ್ಲಿಪ್ತವಾಗಿ ಹೇಳುವ ನಿರುದ್ವಿಗ್ನತೆಯನ್ನೂ ಅವರಿಗೆ ಕಲಿಸಿದೆ. ಮತ್ತಿನ್ನೇನು ಬೇಕು? ತಾರಿಣಿಯವರು ಮನಸ್ಸು ಮಾಡಬೇಕು ಅಷ್ಟೆ.

❑

ಕನಸುಗಳು ಚೆಲ್ಲಿವೆ

●

ಕನಸುಗಳು ಚೆಲ್ಲಿವೆ
ಹೂ ಮಾರುವ ಹುಡುಗಿಯ
ಹೂ ಬುಟ್ಟಿಯೊಳಗೆ

ಕನಸುಗಳು ಚೆಲ್ಲಿವೆ
ಮಂದಗೆ ಉರಿವ ಆ
ನಂದಾ ದೀವಿಗೆಯೊಳಗೆ

ಕನಸುಗಳು ಚೆಲ್ಲಿವೆ
ಬಿದ್ದ ಬೀಜವದು ಗರ್ಭ
ಸಾಗರದಿ ಮೊಳೆತು ಚಿಪ್ಪೊಡೆದು
ಬರುವ ಮುತ್ತೊಳಗೆ

ಕನಸುಗಳು ಚೆಲ್ಲಿವೆ
ಜಲ್ಲಿಯ ಹೊರಲು
ನೆತ್ತಿಯಲಿ ಸುತ್ತಿಟ್ಟ
ಆ ಸಿಂಬಿಯೊಳಗೆ

ಕನಸುಗಳು ಚೆಲ್ಲಿವೆ
ಕಲ್ಲು ಕರಗಿ ಶಿಲೆಯಾಗಿ
ಅರಳುವ ಬಂಡೆಯೊಳಗೆ

ಕನಸುಗಳು ಚೆಲ್ಲಿವೆ
ತಣ್ಣಗೆ ಹರಿವ
ನದಿಯ ಮಳಲೊಳಗೆ

ಚೆಲ್ಲಿದ ಕನಸುಗಳ
ಬೊಗಸೆಯಲಿ ತುಂಬಿ
ಬಚ್ಚಿಟ್ಟಿದ್ದೇನೆ
ಜಕ್ರನೆ ಜಾರಿಸುವ ಪಾಚಿಯ
ಸ್ಪರ್ಶಕೆ ಸೋಲದ
ಎದೆಯ ಗೂಡೊಳಗೆ

❑

● ಸುಶೀಲಾ ಸೋಮಶೇಖರ್

ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟದ ಬದುಕು

ನಿರೂಪಣೆ : *ಚಂಪಾವತಿ*

(ಹಿಂದಿನ ಸಂಚಿಕೆಯಿಂದ)

ಈ ಕೇಸ್ ಆದ ಮೇಲೆ ನನ್ನ ಮೇಲೆ ಕಣ್ಣು ಬಿತ್ತು. ಮತ್ತೆ ಹಿಂಸೆ ಕೊಡೋಕೆ ಪ್ರಾರಂಭ ಮಾಡಿದ್ರು, ಮತ್ತೆ ಅವಮಾನ ಅಗ್ಲಿ ಅಂತ F.C.ಗೆ ಹಾಕಿದ್ರು, ನಾನು 'ಎಲ್ಲಾದ್ರು ಹಾಕು. ಬೇಕಿದ್ರೆ ಚೇರ್ ಹಾಕಿ ಕೂರ್ಸು ನಾನು ಎಲ್ಲಿದ್ರು ಕೆಲ್ಸ ಮಾಡ್ತೀನಿ, ಸಂಬಳ ಬೇಕು ಅಷ್ಟೇ. ಕೆಲಸಕ್ಕೆ ಬೇಡ ಅಂದ್ರೆ ಲೆಟರ್ ಕೊಡು' ಅಂದೆ Production ಕೊಡ್ತಾ ಇಲ್ಲ ಅಂದ್ರೆ – ಹಾಗಂತನೇ ಲೆಟರ್ ಕೊಡು ಅಂತಿದ್ದೆ. 8 ವರುಷದಿಂದ Production ಕೊಟ್ಟಿದೀನಿ, ಈಗ ಯಾಕೆ ತಕರಾರು ಅಂತ ಕೇಳ್ತಾ ಇದ್ದೆ. ಅವರಿಗೆಲ್ಲ ನಾನು ದೊಡ್ಡ ತಲೆ ನೋವಾಗಿದ್ದೆ. ಅನಂತರ ಹೆಡ್ ಆಫೀಸ್‌ನವರನ್ನು ಕರೆಸಿದ್ರು, ಬೇರೆ ಆಫೀಸ್‌ಗೆ ಕಳುಸ್ತೀವಿ ಅಂದ್ರು. ನಾನು ಹೋಗೋಲ್ಲ ಎಂದೆ. ಅಪಾಯಿಂಟ್‌ಮೆಂಟ್ ಆರ್ಡರ್‌ನಲ್ಲಿ ಹಾಗಂತ ಹೇಳಿದೀರ? ಅಂದೆ. ನಾನು ಕೆಲ್ಸ ಬಿಟ್ಟು ಹೋಗೋಲ್ಲ ಅಂತ ಅವರಿಗೆ ಗೊತ್ತಾಗಿ ಹೋಯ್ತು. ಯೂನಿಯನ್‌ಗೆ 2–3 ಜನ ಕರ್‍ಕೊಂಡು ಹೋಗ್ತಾ ಇದ್ದೆ. ಅವರಿಗೆ ಯಾರಿಗಾದ್ರು ಬಯ್ದರೆ P.M.ಗೆ ಬಯ್ತಾ ಇದ್ದೆ. F.C.ನಲ್ಲಿ



ಜಾಸ್ತಿ ಕೆಲ್ಸ ಕೊಡು ಅಂತ ಸೂಪರ್‌ವೈಸರ್‌ಗೆ ಹೇಳಿಕೊಡ್ತಾ ಇದ್ರು, ಆದ್ರೆ ಅವರು ಹೇಳಿದ್ದಕ್ಕಿಂತ ಜಾಸ್ತಿ ಕೆಲ್ಸ ನಿಭಾಯಿಸಿ ಕೂತ್ಕೊಂಡು ಬಿಡ್ತಾ ಇದ್ದೆ.

ಯೂನಿಯನ್ Consultation ಇದ್ದಾಗ 5 ದಿನ ರಜೆ ತಗೊಂಡಿದ್ದೆ. F.C.ನಲ್ಲಿ ಇದ್ದೆ. ಹಾಗಾಗಿ ಮ್ಯಾನೇಜರ್ ಸಹಿ ಹಾಕಿಸಿಕೊಂಡು ಹೋಗಿದ್ದೆ. P. M. ಹತ್ತಿರ ಹೋಗೋ ಅವಶ್ಯಕತೆ ಇರಲಿಲ್ಲ. ಭಾನುವಾರ ರ್‍ಯಾಲಿ ಇತ್ತು. ಪೇಪರ್‌ನಲ್ಲಿ ಬಂದಿತ್ತು. ಸೋಮವಾರ ಪೇಪರ್ ಇಟ್ಟುಕೊಂಡು P.M. ಕುಳಿತುಕೊಂಡಿದ್ದರು. ಆಯಮ್ಮ ಬಂದ ತಕ್ಷಣ ಕ್ಯಾಬಿನ್‌ಗೆ ಕಳಿಸಿ, ಬ್ಯಾಚ್ ಒಳಗಡೆ ಬಿಡಬೇಡಿ ಅಂತ ಹೇಳಿದ್ದರು. ಅಲ್ಲಿಗೆ ಹೋದೆ 'ಯಾರು ನಿಮಗೆ ರಜೆ ಕೊಟ್ಟವ್ರು'? ಅಂದರು. F.C. ನಲ್ಲಿದ್ದೆ. ಮ್ಯಾನೇಜರ್ ಹತ್ರ ಸಹಿ ಮಾಡಿಸಿಕೊಂಡಿದೀನಿ ಅಂದೆ. ಅಲ್ಲೇ ಇದ್ದ ಮ್ಯಾನೇಜರ್– 'ಏನೋ urgentನಲ್ಲಿದ್ದೆ, ಸಹಿ ಹಾಕಿಬಿಟ್ಟೆ' ಅಂದರು. 'ಖಾಲಿ ಪೇಪರ್ ತಂದ್ರೆ ನೋಡದೇ ಸಹಿ ಮಾಡಿ ಬಿಡ್ತೀರಾ? ಹೀಗೆಲ್ಲ ಮಾತನಾಡಬೇಡಿ' ಅಂದೆ. ನಂತರ P. M. ನನ್ನನ್ನೇ ಕೇಳಿ ರಜೆ ಹಾಕಬೇಕು ಅಂತ ಹೇಳಿದರು. ಪೇಪರ್ ತೋರಿಸಿ 'ಏನಿದು ಯೂನಿಯನ್‌ನಲ್ಲಿ ಇದೀಯ'? ಅಂತ ಕೇಳಿದರು. 'ಹೌದು. ಎಂಟು ಘಂಟೆ ಕೆಲ್ಸ ಮಾಡ್ತೀನಿ, ಅದಕ್ಕೇನಾದ್ರು ತೊಂದ್ರೆ ಮಾಡಿದೀನಾ, ತೊಂದ್ರೆ ಮಾಡಿದ್ರೆ ಹೇಳಿ' ಅಂತ ಹೇಳಿ ಈಚೆ ಬಂದೆ.

ನಂತರದಲ್ಲಿ ಮ್ಯಾನೇಜ್‌ಮೆಂಟ್ ಪ್ಲ್ಯಾನ್ ಮಾಡಿ ಒಂದೂವರೆ ತಿಂಗಳಿಗೆ ಬ್ಯಾಚ್ ಕನೆಕ್ಷನ್ ಇಲ್ಲದೇ ಇರೋ ತರಹ ಕೆಲ್ಸಕ್ಕೆ ಹಾಕಿದ್ರು, 4.30ಕ್ಕೆ ನಮಗೆ ಕೆಲ್ಸದಿಂದ ಬಿಟ್ಟು ಬಿಡೋರು, ನಾವು ಬೇರೆ ಕಾರ್ಮಿಕರನ್ನು ಭೇಟಿಯಾಗಬಾರದು ಅಂತ. ಒಂದೂವರೆ ತಿಂಗಳಾದ ಮೇಲೆ ನನ್ನನ್ನು, ಮತ್ತು ಇನ್ನೂ ನಾಲ್ಕು ಜನರನ್ನ ಪರ್ಸನಲ್ ಡಿಪಾರ್ಟ್‌ಮೆಂಟ್‌ಗೆ ಕರೆಸಿ, ಕೆಲಸಕ್ಕೆ ಬರಬಾರದು ಅಂತ suspend ಮಾಡಿದ ಲೆಟರ್ ನನಗೆ ಕೊಟ್ರು, ಕಾರಣ ಕೇಳಿದ್ರೆ ಆಮೇಲೆ ತಿಳುಸ್ತೀವಿ ಅಂದ್ರು. ಸಹಿ ಮಾಡಿ ಈಚೆ ಬಂದೆ.

ಮಾರನೇ ದಿನ ಕಾರ್ಮಿಕರು ಸ್ಟ್ರೈಕ್ ಮಾಡ್ತೀವಿ ಅಂದ್ರು, ಯೂನಿಯನ್ ಆವಾಗಷ್ಟೆ ಮಾಡಿದ್ವಿ, ಇನ್ನೇನೊ ಸಮಸ್ಯೆಯಾಗಿ ಬೇರೆ ಕಾರ್ಮಿಕರಿಗೆ ತೊಂದರೆಯಾಗುತ್ತೆ ಅಂತ ಬೇರೆ ಬೇರೆ ಸಂಘಟನೆಗಳಿಂದ ಹೋರಾಟ ಮಾಡಿದ್ವಿ, ಕಾರ್ಮಿಕ ಮುಖಂಡರನ್ನ ಹೀಗೆ ತೆಗೆದು ಹಾಕಬಾರದು ಅಂತ ಪ್ರೆಸ್‌ಮೀಟ್ ಮಾಡಿದ್ವಿ, ಅವರು ಫ್ಯಾಕ್ಟರಿ ಬಗ್ಗೆ ಯಾರೂ ಮಾತನಾಡಬಾರದು ಅಂತ ಇಂಜೆಕ್ಷನ್ ಆರ್ಡರ್ ತಂದ್ರು, ನಾವು ಫ್ಯಾಕ್ಟರಿಯ ಬ್ರ್ಯಾಂಡ್‌ಗಳಿಗೆ ಬರದ್ವಿ, ಇಷ್ಟರಲ್ಲಿ ಎನ್‌ಕ್ವೈರಿ ಕಮಿಟಿ ಮಾಡಿದ್ರು. ರಾಮಕೃಷ್ಣಭಟ್ ನ್ಯಾಯಾಧೀಶರು. ಅವರೂ ಬಂದ್ರು, ಅಷ್ಟರಲ್ಲಿ ಮ್ಯಾನೇಜ್‌ಮೆಂಟ್‌ನವರು ಐದುಜನ ಕಾರ್ಮಿಕರನ್ನ ರೆಡಿ ಮಾಡಿದ್ರು, Production ಕೊಡ್ತಾ ಇರಲಿಲ್ಲ, ಸೂಪರ್‌ವೈಸರ್‌ನ ಕೆಟ್ಟ ಕೆಟ್ಟದ್ದಾಗಿ ಬಯ್ತಾ ಇದ್ರು, ಕಾರ್ಮಿಕರಿಗೆ ಕೆಟ್ಟ ಕೆಟ್ಟ ಭಾಷೆ ಬಳಸಿ ಬಯ್ತಾ ಇದ್ದರು, ಬಡ್ಡಿಗೆ ಸಾಲ ಕೊಡ್ತಾ ಇದ್ರು, ಹೀಗೆ ಏನೇನೋ ಕಾರ್ಮಿಕರಿಗೆ ಹೇಳಿಕೊಟ್ರು, ಅವರೊಬ್ಬರಿಂದಾಗಿ ಫ್ಯಾಕ್ಟರಿ ಮುಚ್ಚಿ ಹೋಗುತ್ತೆ, ನೀವು ಇದೆಲ್ಲ ಹೇಳಲೇಬೇಕು ಅಂತ ಕಾರ್ಮಿಕರಿಗೆ ತಾಕೀತು ಮಾಡಿದ್ರು. ಪಾಪ, ಅವರೂ ಹೆದರಿಕೊಂಡು, ಬೆವರಿಕೊಂಡು, ನನ್ನ ಮುಖ ನೋಡದೇ ಅದನ್ನೇ ಹೇಳಿದ್ರು. ನಾನು ಸಾಯಂಕಾಲ ಆ ಐದೂಜನ ಕಾರ್ಮಿಕರ ಮನೆಗೆ ಹೋದೆ. ಅವರನ್ನೇ ಎಷ್ಟು ಹಣ ಬಡ್ಡೀಗೆ ಕೊಟ್ಟೀದೀನಮ್ಮ ನಿಮ್ಗೆ ಅಂದೆ. ಬರೋ 2500 ರೂನಲ್ಲಿ ಬಡ್ಡೀಗೆ ಕೊಡೋಕೆ ಆಗುತ್ತಾ? ಪಾಪ, ಕೆಲ್ಸ ಹೋಗುತ್ತೆ ಅಂತ ನೀವೂ ಹೀಗೆ ಮಾಡಿರ್ತೀರಾ ಅಂತ ಹೇಳಿ, ನಿಮ್ಮ ಜಾಗದಲ್ಲಿ ಇದ್ದಿದ್ರೆ ನಾನೂ ಹೀಗೇ ಮಾಡ್ತಾ ಇದ್ನೋ, ಏನೋ ಅಂತ ಹೇಳಿ ಬಂದೆ. ಆ ನಂತರ ಕಾರ್ಮಿಕರು ಎಲ್ಲಾರ ಹತ್ರನೂ ತಾವು ಹೇಳಿದ್ದು ಸುಳ್ಳು ಅಂತ ಹೇಳ್ಕೊಂಡು ಬಂದ್ರು, ನಂತರ ಬ್ರ್ಯಾಂಡ್‌ಗಳಿಂದ ಒತ್ತಡ ಬಂತು. ಎನ್‌ಕ್ವೈರಿ ನಿಲ್ಲಿಸಿದ್ರು. Brandಗಳು ಆರ್ಡರ್ ಕೊಡೋಲ್ಲ ಅಂತ ಒತ್ತಡ ಹಾಕಿದಾಗ, ನೀವು ಫ್ಯಾಕ್ಟರಿಗೆ ಬರೋದು ಬೇಡ, ಹೊರಗಡೆ ಯೂನಿಯನ್‌ನಲ್ಲಿಯೇ ಕೆಲ್ಸ ಮಾಡಿ, ನಾವು ಪೂರ್ತಿ ಸಂಬಳ ಕೊಡ್ತೀವಿ ಅಂದ್ರು, ಹಾಗಾಗಿ ಈಗ ನಾನು ಫ್ಯಾಕ್ಟರಿಗೆ ಹೋಗ್ತಾ ಇಲ್ಲ. ಯೂನಿಯನ್‌ಗೆ ಪೂರ್ಣ ಸಮಯ ಕೆಲ್ಸ ಮಾಡ್ತೀನಿ ಫ್ಯಾಕ್ಟರಿಯಿಂದ ಸಂಬಳ ತಗೋತಾ ಇದೀನಿ P.F. ESI ಎಲ್ಲಾ ಹಿಡಿದು, 3000 ರೂಪಾಯಿ ಸಂಬಳ ಕೊಡುತ್ತಾರೆ.

ಸೂಪರ್‌ವೈಸರ್ ಕೆಟ್ಟದ್ದಾಗಿ ಬಯ್ದ ಅಂತ ಫ್ಯಾಕ್ಟರಿ ಟಾಯ್ಲೆಟ್ ಒಳಗೇ ಒಬ್ಬ ಕಾರ್ಮಿಕಳು ನೇಣು ಹಾಕಿಕೊಂಡ್ಲು. ಸತ್ತ ಮೂರುದಿನಕ್ಕೆ ಗೊತ್ತಾಯ್ತು. 17 ವರ್ಷದ ಹುಡುಗಿಯೊಬ್ಬಳು ಇನ್ನೊಬ್ಬಳು ಸ್ವಲ್ಪ ಲೇಟಾಗಿ ಬರ್ತೀನಿ, ಊರಲ್ಲಿದೀನಿ ಅಂದ್ಲು ಅಂತ ಅವಳ ಕಾರ್ಡ್ ಇವಳು ಪಂಚ್ ಮಾಡಿದ್ದಾಳೆ. ಸಿಕ್ಕಿ ಹಾಕಿಕೊಂಡ್ಲು. ಪೇಪರ್‌ನಲ್ಲಿ ಹಾಕಿಸ್ತೀವಿ ಅಂತ ಅವ್ರು ಹೆದರಿಸಿದಾರೆ. ಆಕೆ ಮನೆಗೆ ಹೋಗಿ ಆತ್ಮಹತ್ಯೆ ಮಾಡಿಕೊಂಡ್ಲು. ಹೀಗೆ ಅಮಾಯಕ ಹೆಣ್ಣುಮಕ್ಕಳು ಏನು ಮಾಡಬೇಕು ಅಂತ ಗೊತ್ತಾಗ್ದೇ ಸಾಯ್ತಾರೆ. ಆದರೆ ಸಾವು ಉತ್ತರ ಅಲ್ಲ ಅನ್ನೋದನ್ನ ಕಾರ್ಮಿಕರು ಅರಿತುಕೊಳ್ಳೋ ಹಾಗೆ ಯೂನಿಯನ್ ಕೆಲಸ ಮಾಡಬೇಕಾಗಿದೆ.

* * *

ಕೆಲ್ಸ ಮುಗಿದ ಮೇಲೆ ನಾಲ್ಕೈದು ಜನ ಕಾರ್ಮಿಕರು ಟಾಟಾ ಸುಮೋದಲ್ಲಿ ಹೋಗಿದ್ದಾರೆ. ಅವರಿಗೆ ಅಲ್ಲಿರೋರು ಜಾಸ್ತಿ ಪೆಪ್ಸಿ ಕೊಡಿಸಿದ್ದಾರೆ. ಎಲ್ಲಾ ಹುಡುಗೀರು ಇಳಿದಾದ ಮೇಲೆ ಕೊನೇಲಿ ಇಳಿಯೋ ಹುಡುಗಿ ಮೇಲೆ ನಾಲ್ಕೈದು ಜನ ಸೇರಿ ಅತ್ಯಾಚಾರ ಮಾಡಿ ತಂದು ಫ್ಯಾಕ್ಟರಿ ಗೇಟ್ ಹತ್ರ ಬಿಸಾಕಿ ಹೋಗಿದ್ದಾರೆ. ಬೆಳಿಗ್ಗೆ ಮ್ಯಾನೇಜ್‌ಮೆಂಟ್‌ನವ್ರು ಆಸ್ಪತ್ರೆಗೆ ಕಳಿಸಿದ್ರು. ಈ ಕಾರ್ಮಿಕಳಿಗೆ ಈ ತರಹ ಆಗಿದೆ, ಅವಳು ಬಸಿರಿ ಅಲ್ಲ ಅಂದ್ರೆ ಕೆಲ್ಸ ಕೊಡ್ತೀವಿ ಅಂದ್ರು. ಆವಾಗ ನಾವು ಲೆಟರ್ ಬರದ್ವಿ. ಆಕೆ ಬಸಿರಿ ಆಗೋಕೂ, ನೀವು ಕೆಲ್ಸ ಕೊಡೋಕು ಏನು ಸಂಬಂಧ? O.T. ಮಾಡಿಸ್ತೀರಿ. ಸಂಜೆ ಮನೆಗೆ ಕಳಿಸೋ ಜವಾಬ್ದಾರಿ ನಿಮ್ಮದು ಅಂತ. ಹೀಗೆಲ್ಲ letter ಬರೆದ ಮೇಲೆ ಕೆಲಸ ಕೊಟ್ರು. ಆ ಹುಡುಗಿ ಈಗ ಮದ್ವೆ ಆಗಿ ಚೆನ್ನಾಗಿದ್ದಾಳೆ.

* * *

ಟಿಂಬರ್ ಯಾರ್ಡ್ ಲೇಔಟ್‌ನಲ್ಲಿ ಒಂದು ಗಾರ್ಮೆಂಟ್ ಫ್ಯಾಕ್ಟರಿ ಇದೆ. ಅಲ್ಲಿ ರತ್ನ ಅಂತ, ಆಕೆಗೆ ಒಂಬತ್ತು ತಿಂಗಳು ಆಗಿತ್ತು. ಅವರಿಗೆ ಗಂಡುಮಗು ಬೇಕು ಅಂತ ಮತ್ತೆ ಬಸಿರಿ ಆದ್ಲು. ಹಿಂದಿನ ದಿನ ಹೋಗಿ scan ಮಾಡ್ಸಿ, ಚೆಕ್ ಮಾಡ್ಸಿದಾಳೆ. 15 ದಿನ ಟೈಮ್ ಕೊಟ್ಟಿದ್ದಾರೆ. ಹಾಗಾಗಿ ಬೆಳಿಗ್ಗೆ ಕೆಲಸಕ್ಕೆ ಹೋಗಿದ್ದಾಳೆ. ಅವತ್ತು 28ನೇ ತಾರೀಖು ಇರಬೇಕು. ಫ್ಯಾಕ್ಟರಿನಲ್ಲಿ ತಿಂಗಳ ಪೂರ್ತಿ ರಜೆ ಹಾಕದೇ ಕೆಲಸಕ್ಕೆ ಹೋದ್ರೆ 200 ರೂಪಾಯಿ attendance bonus ಕೊಡ್ತಾರೆ. ಇದಕ್ಕೋಸ್ಕರ ಕಾರ್ಮಿಕರು ಎಂತಹ ಕಷ್ಟ ಇದ್ರೂ ರಜೆ ಹಾಕೋಲ್ಲ. ಇನ್ನೂ ಎರಡು ದಿನ ಹೋದ್ರೆ 200 ರೂಪಾಯಿ ಬರುತ್ತೆ ಅಂತ ಆಕೆ ಬಂದಿದಾಳೆ. ಆದರೆ ಹೊಟ್ಟೇನೋವು ಕಾಣಿಸಿಕೊಂಡಿದೆ. ಹತ್ತು ಘಂಟೆಗೆಲ್ಲ ಆಕೆಗೆ ಹೊಟ್ಟೇನೋವು ಜಾಸ್ತಿ ಆಗಿದೆ. ಹೆರಿಗೆ ನೋವು ಅಂತ ಆಕೆಗೆ ಗೊತ್ತಾಗಿಲ್ಲ. ಸೂಪರ್‌ವೈಸರ್‌ನ ಕೇಳೋಕೆ ಅಂತ ಹೋಗಿದಾಳೆ. ಅವರು 'ಕೆಲ್ಸ ಮಾಡೋಕೆ ಯಾರೂ ಇಲ್ಲ, ಹೋಗಮ್ಮ' ಅಂತ ಅನುಮತಿ ಕೊಡದೇ ಕಳ್ಸಿದಾರೆ. Feeding helpersಗೆ, ಎಲ್ಲರಿಗೂ ಹೇಳಿದಾಳೆ. P.M. 'ನಿಂದು ಒಳ್ಳೇ ಗೋಳಾಯ್ತಲ್ಲ' ಅಂತ ಬಯ್ದಿದಾರೆ. ಅಷ್ಟರಲ್ಲಿ ಗಂಟೆ 12.45 ಆಗಿದೆ. ಫ್ಯಾಕ್ಟರಿನಲ್ಲಿ Permission ಲೀವ್ ಕೇಳೋದು ತುಂಬಾ ಕಷ್ಟ. ಮೆಟ್ಟಿಲು ಹತ್ತಬೇಕು, ಇಳೀಬೇಕು. ಅಲ್ಲಿ ಹೋಗಬೇಕು, ಇಲ್ಲಿ ಹೋಗಬೇಕು... ಹೀಗೇ... ಫೀಡಿಂಗ್ ಹೆಲ್ಪರ್, ಸೂಪರ್ ವೈಸರ್, ಫ್ಲೋರ್ ಮ್ಯಾನೇಜರ್, P.M. ಲೆಟರ್ ಇಸಿದುಕೊಂಡ್ರೇ ಪರ್ಮಿಶನ್ ಸಿಗೋದು. ಅಲೆದಾಡಿದಾಳೆ. ಅಷ್ಟರಲ್ಲಿ ತುಂಬಾ ಹೊತ್ತಾಗಿದೆ, 'ನನ್ನೆ ಜೊತೆ ಯಾರ್ನಾದ್ರು ಕಳ್ಸಿ' ಅಂತ ಕೇಳಿದಾಳೆ. 'ನಿನ್ನ ಕಳಿಸೋದೆ ಕಷ್ಟ, ಇಲ್ಲಿ ಕೆಲ್ಸ ಮಾಡೋಕೆ ಯಾರೂ ಇಲ್ಲ' ಅಂತ ಹೇಳಿದಾರೆ. ಆಕೆಗೆ ತುಂಬಾ ಕಷ್ಟ ಆಗಿದೆ. Out Pass ಕೊಟ್ಟು ಸೆಕ್ಯೂರಿಟಿ ಹತ್ರ ಸಹಿ ಮಾಡಬೇಕು. ಫ್ಯಾಕ್ಟರಿಯಿಂದ ಹತ್ತು ಹೆಜ್ಜೆ ಬಂದಿದಾಳೆ – ಆಕೆಗೆ ಹೆರಿಗೆ ಆಗಿಬಿಟ್ಟಿದೆ. ರೋಡ್‌ನಲ್ಲಿಯೇ ಆಗಿಬಿಟ್ಟರೆ ಎಲ್ಲರೂ ನೋಡ್ತಾರೆ ಅವಮಾನ ಆಗುತ್ತೆ ಅಂತ ಆಕೆ ಎಲ್ಲಾ ಸೀರೆ ಮುದುರಿಕೊಂಡು ಆಟೋ ಕೇಳೋಕೆ ನೋಡಿದಾಳೆ. ಅಷ್ಟರಲ್ಲಿ ಒಂದು ಹುಡುಗಿ ಅವರ ಚಿಕ್ಕಮ್ಮನ ಊಟ ತರ್ತಾ ಇದ್ಲು. ಅವಳು 'ಏನಾಯ್ತು' ಅಂದ್ರೇ ಆಟೋ ತಗೊಂಡು ಬಾ, ಡೆಲಿವರಿ ಆಗಿದೆ' ಅಂದ್ಲು. ಆ ಹುಡುಗಿ, ಆಟೋ ಡ್ರೈವರ್ ಆಕೇನಾ ಎತ್ತಿ ಆಟೋದಲ್ಲಿ ಹಾಕಿಕೊಂಡು ಮನೆ ಹತ್ರ ಬಿಟ್ಟಿದ್ದಾರೆ. ಆಕೆಯ ಅಪ್ಪ–ಅಮ್ಮ ಮನೆ ಕೆಲ್ಸಕ್ಕೆ ಹೋಗಿದ್ದಾರೆ. ಅವಳು ಕತ್ತರಿ ತಗೊಂಡು ಹೊಕ್ಕಳು cut ಮಾಡಿಕೊಂಡಿದಾಳೆ. ಇಷ್ಟೊತ್ತಿಗೆ ಹುಟ್ಟಿರೋ ಗಂಡು ಮಗು ಸತ್ತೇ ಹೋಗಿದೆ. ಅಲ್ಲೇ ಹತ್ರ ಮಗೂನ ಮಣ್ಣು ಮಾಡಿದಾರೆ. 4 ದಿನ ಆಗಿದೆ. ಒಂದು ದಿನವೂ ಆಸ್ಪತ್ರೆಗೆ ಹೋಗಿಲ್ಲ. ಮನೆಯಲ್ಲಿಯೇ ಇದಾಳೆ. ನನ್ಗೆ ವಿಷಯ ಗೊತ್ತಾದಾಗ ಮೂರು ದಿನ ಆಗಿ ಹೋಗಿತ್ತು. ಭಾನುವಾರ ನನ್ಗೆ ಗೊತಾಯ್ತು. ESI ಗೆ ಕರ್ಕೊಂಡು ಹೋದೆ. ಆಸ್ಪತ್ರೆಗೆ ಆಕೆ ಚೆಕ್‌ಅಪ್‌ಗೆ ಹೋಗಿಯೇ ಇಲ್ಲ. ಬಸಿರಿ ಅಂತ ದಾಖಲೇನೇ ಇಲ್ಲ. ಕಾರ್ಮಿಕರಿಗೆ ಇದೆಲ್ಲ ತಿಳಿಯೋದೇ ಇಲ್ಲ ಅಂತ ವಾದ ಮಾಡಿದ ಮೇಲೆ ರಾಜಾಜಿನಗರದಲ್ಲಿ ದಾಖಲೆ ಮಾಡಿಕೊಟ್ರು. ಲೀವ್ ಹಾಕ್ಸಿದ್ವಿ, ಬ್ರ್ಯಾಂಡ್‌ನವರಿಗೆ Internet ನಲ್ಲಿ ಸುದ್ದಿ ಕಳಿಸಿದ್ವಿ, ಮಕ್ಕಳಿಗೆ ಬಟ್ಟೆ ಹೊಲಿಯೋ ಫ್ಯಾಕ್ಟರಿನಲ್ಲಿ ಮಗು ಸಾಯ್ಸಿದ್ದಾರೆ. ಅಲ್ಲಿ ರಕ್ಷಣೆ ಇಲ್ಲ ಅಂತ ಎಲ್ಲಾ ಕಡೆ ಪ್ರಚಾರ ಆಗಿ ಹೋಯ್ತು. ದೊಡ್ಡ issue ಆಯ್ತು. ಆಗ ಮ್ಯಾನೇಜ್‌ಮೆಂಟ್‌ನವರಿಗೆ ಭಯ ಆಯ್ತು. ಸೋಮವಾರ ಆಸ್ಪತ್ರೆಯಲ್ಲಿ ಎಲ್ಲಾ ತೋರಿಸಿ ಮುಗಿಸಿದಿವಿ. ಸಾಯಂಕಾಲ P.M., welfare Officer, ಮ್ಯಾನೇಜರ್ ಅವಳನ್ನು ಭೇಟಿ ಮಾಡಿದಾರೆ. ದುಡ್ಡು ಕೊಡ್ತೀವಿ ಅಂದಿದಾರೆ. ಆಕೆ ಒಪ್ಪಿಕೊಳ್ಳಲಿಲ್ಲ. ಗಂಡು ಮಗು ಸತ್ತಹೋಯಿತು ಅನ್ನೋ ಕಾರಣಕ್ಕೆ ಗಂಡ ಕೋಪಿಸಿಕೊಂಡು ಊರಿಗೆ ಹೊರಟು ಹೋಗಿದ್ದ. ವಿಮೋಚನಾದ ಶಕ್ಕೂನ್ ಇದನ್ನು ಮ್ಯಾನೇಜ್‌ಮೆಂಟ್ ಜೊತೆ ಮಾತಾಡಿ 1.50ಲಕ್ಷ ಕೊಡಿಸಿದ್ರು. ಇರೋ ಎರಡು ಹೆಣ್ಣುಮಕ್ಕಳಿಗೆ 75 ಸಾವಿರದಂತೆ ಫಿಕ್ಸೆಡ್ ಮಾಡಿದಾಳೆ. ಈಗ ಏನೂ ಹೆದರಿಕೆ ಇಲ್ಲದೇ ಕೆಲ್ಸಕ್ಕೆ ಹೋಗ್ತಿದಾಳೆ.

- ಸಂಘಟನೆ ಬಗ್ಗೆ ನನ್ಗೆ ಕ್ಲಿಯರ್ ಆಗಿ ಅರ್ಥ ಆಗಿತ್ತು. ಸಂಘಟನೆ ಹೇಗೆ ಇರಬೇಕು? leadership ತಗೊಂಡವ್ರು ಎಲ್ಲವನ್ನೂ ಕೇಳಿಸಿಕೊಳ್ಳಬೇಕು. ಸಹನೆ ಇರ್ಬೇಕು. ತಾಳ್ಮೆ ಇರಬೇಕು. ಕಾರ್ಮಿಕರಿಗೆ ಎಲ್ಲಾರಿಗೂ ತಿಳಿವಳಿಕೆ ಇರೋಲ್ಲ. ಟ್ರೈನಿಂಗ್ ತೆಗೆದುಕೊಂಡಿರಲ್ಲ. ಸಂಘಟನೆ ಯಾಕೆ ಮಾಡಿಕೊಳ್ಳಬೇಕು ಅಂತ ಗೊತ್ತಿರೋಲ್ಲ. ನನ್ನ ಬಗ್ಗೇನೂ ಏನೋ ಲಾಭ ಇದೆ ಅದ್ಕೆ ಹೋಗ್ತಾಳೆ ಅಂದ್ಕೊಂಡಿರ್ತಾರೆ. ಆದ್ರೂ ಐದು, ಹತ್ತು ಜನ ಇದ್ದಲ್ಲಿ ನಾನು ಸಂಘಟನೆ ಬಗ್ಗೆ ಹೇಳ್ತಾನೇ ಇರ್ತೀನಿ.
- ಒಬ್ಬ ಕಾರ್ಮಿಕರ ಕೇಸಲ್ಲಿ ನಾನು ಸಹಿ ಹಾಕಿದ್ದೆ. ನೀವ್ಯಾರೂ ಸಾಕ್ಷಿ ಆಗಬಾರದು ಅಂತ ಆವಾಗ ಹಿಂಸೆ ಕೊಟ್ರು. ಸೂಪರ್‌ವೈಸರ್ ಮಾಡ್ತೀವಿ, ಯಾವ ಕಾರ್ಮಿಕರಿಗೂ Support ಮಾಡಬಾರದು ಅಂದ್ರು. 10 ಸಾವಿರ ಸಂಬಳ ಕೊಡ್ತೀವಿ ಅಂದ್ರು. 'ಕಾರ್ಮಿಕರಿಗೆ ಯಾರ್‍ಯಾರು ಸಹಾಯ ಮಾಡ್ತಾರೋ ಅವರನ್ನೆಲ್ಲ ದುಡ್ಡು ಕೊಟ್ಟು ಕೊಂಡುಕೊಂಡು ಬಿಡ್ತೀರಾ' ಅಂದೆ. ನನ್ಗೆ 2500 ಸಾವಿರ ಸಂಬಳ ಸಾಕು. ನಿಮ್ಗೆ ಗೊತ್ತಾ – ಲಾಲ್ ಬಹದ್ದೂರ್ ಶಾಸ್ತ್ರೀಗೆ 25ರೂ ಸಂಬಳ ಇತ್ತು. ಅವರ ಹೆಂಡತಿ ಯಾರಿಗೋ ಒಬ್ಬರಿಗೆ ಕೊಂಚ ಸಹಾಯ ಮಾಡಿದ್ರಂತೆ. ಸಹಾಯ ಮಾಡೋದು ಅಂದ್ರೆ ಅಷ್ಟು ಹಣ ಅಗತ್ಯಕ್ಕಿಂತ ಹೆಚ್ಚಿನ ಸಂಪಾದನೆ ಅಂತ ಶಾಸ್ತ್ರೀಅವರು ಮುಂದಿನ ತಿಂಗಳು ಇಪ್ಪತ್ತು ರೂಪಾಯಿ ಸಂಬಳ ಸಾಕು ಅಂತ ಸರ್ಕಾರಕ್ಕೆ ಬರೆದ್ರಂತೆ. ನನ್ಗೆ 10,000 ರೂಪಾಯಿದ್ರೆ ಖರ್ಚು ಮಾಡೋಕೇ ಗೊತ್ತಿಲ್ಲ. ನ್ಯಾಯವಾಗಿ ಬರೋ 2500 ರೂಪಾಯಿ ಸಾಕು ಅಂತ ಮ್ಯಾನೇಜ್‌ಮೆಂಟ್‌ಗೆ ಹೇಳಿದೆ.
- Garment Industryಯ historyನಲ್ಲಿ ಇದೇ ಪ್ರಥಮ ಅನ್ಸುತ್ತೆ, ಹೊರಗಡೆ ಯೂನಿಯನ್‌ನಲ್ಲಿ ಕೆಲ್ಸ ಮಾಡಿ ಕಾರ್ಖಾನೆಯಿಂದ ಸಂಬಳ ತೆಗೆದುಕೊಳ್ತಾ ಇರೋದು! full time union ಗೆ ಕೆಲ್ಸ ಮಾಡ್ತಾ ಇದೀನಿ. ಲೆಟರ್ ಕೊಟ್ಟು ಕಾನೂನು ಪ್ರಕಾರ agreement ಮಾಡಿಕೊಂಡು ನನ್ನನ್ನು ಕಳ್ಸಿಕೊಟ್ಟಿದ್ದಾರೆ. agreement ನಲ್ಲಿ ಏನಿದೆ ಅಂದ್ರೆ "ಇವರು ರೋಲ್‌ನಲ್ಲಿ ಇರ್ತಾರೆ. ಫ್ಯಾಕ್ಟರಿ ಒಳಗಡೆ ಬರೋದು ಬೇಡ". ಏನಾದ್ರು ಕೆಲಸ ಇದ್ರೆ Permission ತೆಗೊಂಡು ಹೋಗಬೇಕು. ಕಾನೂನು ಪ್ರಕಾರ ಕೆಲ್ಸದಿಂದ ತೆಗೆಯೋ ಹಾಗಿಲ್ಲ. ಸಂಬಳ ಕೊಡ್ತಾರೆ. ಬೋನಸ್ ಕೊಡ್ತಾರೆ. ಗೌರವದಿಂದ ಕೂಡಾ ನಡೆಸಿಕೊಳ್ತಾರೆ. ಇದು ಜಾಣತನದಿಂದ ದೂರ ಇಡೋ ಪ್ರಯತ್ನ. ಆದರೆ ಕಾರ್ಮಿಕರಿಗಾಗಿ ಕೆಲಸ ಮಾಡಲು ಸಿಕ್ಕ ಅವಕಾಶ, ಅದನ್ನು ಬಳಸಿಕೋತೀನಿ.
- ಗಾರ್ಮೆಂಟ್ಸ್‌ನಲ್ಲಿ ಎಲ್ಲಾ ಕೆಲ್ಸ ಕಲಿಯೋಕೆ ಬಿಡೋಲ್ಲ. ಕೆಲ್ಸದಿಂದ ತೆಗೆದು ಹಾಕಬೇಕು ಅಂದ್ರೆ ಬೇರೆ ಬೇರೆ ಕೆಲ್ಸ ಕೊಟ್ಟು Production ಒತ್ತಡ ಹಾಕ್ತಾರೆ. ಒಂದೇ ಕೆಲ್ಸ ಮಾಡ್ತಾ ಇರೋ ಅವರಿಗೆ ಬೇರೆ ಬೇರೆ ಕೆಲ್ಸ ಕೊಟ್ಟಾಗ ಕಷ್ಟ ಆಗುತ್ತೆ. Production ಕೊಡೋಕೆ ಆಗೋಲ್ಲ. ಕಾರ್ಮಿಕರನ್ನು ಕೆಲ್ಸದಿಂದ ತೆಗೆದು ಹಾಕೋಕೆ ಇದನ್ನು ತಂತ್ರವಾಗಿ ಬಳಸಿಕೊಳ್ತಾರೆ.
- ಗಂಡುಮಕ್ಕಳು 1000 ಹೆಣ್ಣು ಮಕ್ಕಳಿಗೆ 100 ಜನ ಮಾತ್ರ ಗಾರ್ಮೆಂಟ್ಸ್ ಫ್ಯಾಕ್ಟರಿನಲ್ಲಿ ಕೆಲ್ಸ ಮಾಡ್ತಾರೆ. ಸೂಪರ್‌ವೈಸರ್, P.M. G.M., floor incharge - administration lineನಲ್ಲಿ ಇರೋರೆಲ್ಲ ಗಂಡಸ್ರೇ. ಈ ಹುದ್ದೆಗಳಲ್ಲಿ ಹೆಣ್ಣುಮಕ್ಕಳು ಇಲ್ಲವೇ ಇಲ್ಲ ಅಂತ ಹೇಳಬಹುದು.
- ತುಂಬಾ ಕಷ್ಟದಲ್ಲಿರೋ ಹೆಣ್‌ಮಕ್ಕಳು ಗಾರ್ಮೆಂಟ್ಸ್‌ನಲ್ಲಿ ಕೆಲ್ಸ ಸಿಕ್ಕುತ್ತೆ ಅಂತ ಬರ್ತಾರೆ. ವಿಧವೆಯರು, ಅತ್ತೆ ಮಾವನಿಂದ ಕಿರುಕುಳಕ್ಕೊಳಗಾದವರು. ಗಂಡನ ಹತ್ರ ಸರಿ ಇಲ್ಲದೋರು. ಹೀಗೇ ಅನೇಕ ಕೌಟುಂಬಿಕ ಸಮಸ್ಯೆಗಳ ಒತ್ತಡ ಅವರ ಮೇಲೆ ಇರುತ್ತೆ. ಫ್ಯಾಕ್ಟರಿನಲ್ಲಿ ಬಯ್ಯೋದನ್ನು ಅವರು ಗಂಭೀರವಾಗಿ ತೆಗೆದುಕೊಳ್ಳೋದೇ ಇಲ್ಲ, ಎಂತಹ ಕೆಟ್ಟ ಭಾಷೆ ಬಯ್ದರೂ ಸಹಿಸಿಕೊಳ್ತಾರೆ. ಕೆಲ್ಸ ಹೋಗುತ್ತೆ ಅಂತ ಭಯ. ಅಯ್ಯೋ, ನಮ್ಮ ಅಪ್ಪ–ಅಮ್ಮ ಬಯ್ದ್ರೆ ಮನೆ ಬಿಟ್ಟು ಹೋಗಿ ಬಿಡ್ತೀವಾ? ಸುಮ್ನೆ ಇರೋಲ್ವಾ? ಕೆಲ್ಸ ಕೊಟ್ಟವ್ರು ದೇವರು ಅನ್ಕೋಬೇಕು ಅಂತಾರೆ. ಎಲ್ಲಾ ಹೆಣ್‌ಮಕ್ಕಳಿಗೂ ಕೆಲ್ಸ ಕಳೆದುಕೊಂಡು ಬಿಡ್ತೀವಿ ಅನ್ನೋ ಭಯ, ಅದಕ್ಕೋಸ್ಕರವೇ ಹೀಗೆ ಮಾತಾಡ್ತಾರೆ, ಸಹಿಸಿಕೊಳ್‌ತಾರೆ.
- ನಾನು ಒಂದನೇ ಕ್ಲಾಸಿಗೆ ಮೂರು ತಿಂಗಳು ಮಾತ್ರ ಹೋಗಿರೋದು. ಆದರೆ ನ್ಯಾಯ, ಅನ್ಯಾಯದ ಬಗ್ಗೆ ನನ್ಗೆ ಒಂದು ಕಲ್ಪನೆ ಇದೆ. ಹೋರಾಟದ ಮನೋಭಾವ ಇದೆ. ಬಡತನದಲ್ಲಿ, ಹಳ್ಳಿಯಲ್ಲಿ ಹುಟ್ಟಿ ಬೆಳೆದವರಿಗೆ ಇಂತಹ ಸಮಸ್ಯೆಗಳಿಗೆ ಹೊಡೆದಾಡೋದು ಕಷ್ಟ ಅನ್ನಿಸೋಲ್ಲ. ಸಮಾಜದಲ್ಲಿ ಬದಲಾವಣೆ ಆಗಬೇಕೆಂದ್ರೆ ನಾವೆಲ್ಲ ಒಟ್ಟಿಗೆ ಬರ್ಬೇಕು. ಈವಾಗ ಹಣ ಮುಖ್ಯವಾಗಿದೆ, ಕಣ್ಣು ಮುಚ್ಚಿ ತೆಗೆಯೋದ್ರಲ್ಲಿ ಏನೇನೋ ನಡೆಯುತ್ತೆ, ಹೋರಾಟದಿಂದ ಮಾತ್ರ ಅನ್ಯಾಯ ಸರಿಪಡಿಸೋಕೆ ಸಾಧ್ಯ. ಬಡವರಿಗೆ ನ್ಯಾಯ ದೊರಕಬೇಕು ಅಂದ್ರೆ ಎಲ್ಲಾ ಒಟ್ಟಿಗೆ ಬಂದು ಹೋರಾಡಬೇಕು ಅನ್ನೋದು ನನ್ನ ಭಾವನೆ.
- ಹೋರಾಟದ ಭಾವನೆ ನನ್ಗೆ ಚಿಕ್ಕ ವಯಸ್ಸಿನಿಂದಲೂ ಇತ್ತು. ನಾನು ಈ ರೀತಿಯ ಹೋರಾಟದ ಬದುಕಿನಲ್ಲಿ ಸಂತೋಷ ಪಡ್ತೀನಿ, ನನ್ಗೆ ಆತ್ಮ ತೃಪ್ತಿ ಸಿಕ್ಕುತ್ತೆ, – ನನ್ನ ಸಂಸಾರ, ಮಕ್ಕಳಲ್ಲಿ ಸಂತೋಷ ಪಡಕ್ಕಿಂತ ಹೆಚ್ಚಾಗಿ ಬೇರೆ ಹೆಣ್ ಮಕ್ಕಳು, ಕಾರ್ಮಿಕರಿಗೆ ಅನ್ಯಾಯ ಆದಾಗ, ಗಂಡ ಹೊಡೆದಾಗ ಎಷ್ಟೊತ್ತಿನಲ್ಲೇ ಆದ್ರೂ ಪೊಲೀಸ್ ಸ್ಟೇಷನ್‌ಗೆ ಹೋಕ್ತೀನಿ. ಅವ್ರಿಗೆ ನ್ಯಾಯ ಸಿಕ್ಕಾಗ ನನ್ಗೆ ಒಂಥರಾ ತೃಪ್ತಿ. ಕುಟುಂಬದೊಳಗಿನ ಸಂತೋಷಕ್ಕಿಂತ ಈ ಹೋರಾಟದ ಬದುಕು ನನ್ಗೆ ಆನಂದ ತೃಪ್ತಿ ಎರಡೂ ಕೊಟ್ಟಿದೆ.
- ಸಂಘಟನೆ ನನ್ಗೆ ಮುಖ್ಯ. ಮಕ್ಕಳು, ಗಂಡ ಹೇಗೆ ಮುಖ್ಯಾನೋ ಸಂಘಟನೆ ಕೂಡಾ ಹಾಗೆಯೇ ಸಂಸಾರದ ಭಾಗ ಅಂದುಕೊಂಡಿರೋಳು ನಾನು. ಸಂಸಾರಕ್ಕೆ ಗಮನಕೊಡ್ತೀನಿ. ಆದರೆ ಹೋರಾಟ ನನ್ನ ಬದುಕಿನ ಭಾಗ. ನನ್ನ ಮನಸ್ಸಿನ ಆಸೆ, ಕನಸು. ಅದನ್ನ ಬಿಟ್ಟು ಬಿಡೋಕೆ ನನ್ಗೆ ಆಗೋಲ್ಲ. ನನ್ನ ಕುಟುಂಬವನ್ನೂ ನನ್ನ ಈ ಬದುಕಿಗೆ ಒಗ್ಗಿಸಿದೀನಿ. ನನ್ನ ಸಂಸಾರ ಅಂದ್ರೆ ಗಂಡ–ಮಕ್ಕಳನ್ನೂ ಕೂಡಾ ಹೋರಾಟಕ್ಕೆ ಎಳೀಬೇಕು, ಬೇಗ ಅಲ್ಲದಿದ್ದರೂ ನಿಧಾನವಾಗಿ. ಹಾಗಾಗಿ ನನ್ನ ಎಲ್ಲಾ ಚಟುವಟಿಕೆಗಳನ್ನೂ ನಾನು ಮನೇನಲ್ಲಿ ವಿವರಿಸುತ್ತಾ ಇರ್ತೀನಿ.

- *ಯೂನಿಯನ್ ಇದೆ ಅಂತ ಗೊತ್ತಾಗಬೇಕು. ಕಾರ್ಮಿಕರು ಕೆಲ್ಸಾನೂ ಮಾಡಬೇಕು. ಯಾಕಂದ್ರೆ 5ಲಕ್ಷ ಕಾರ್ಮಿಕರು ಇದಾರೆ. ಗಾರ್ಮೆಂಟ್ಸ್ ಫ್ಯಾಕ್ಟರಿಗಳು ಬೇಕು. ಅಲ್ಲಿ ನಡೀತಾ ಇರೋ ಶೋಷಣೆ ಕಡಿಮೆ ಆಗಬೇಕು. ಕಾನೂನುಗಳು ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಯೂನಿಯನ್‌ಗಳು ಫ್ಯಾಕ್ಟರಿ ಹಾಗೂ ಮ್ಯಾನೇಜ್‌ಮೆಂಟ್ ಮಧ್ಯೆ ಸೇತುವೆಯಾಗಿ ಕೆಲ್ಸ ಮಾಡಬೇಕು. ಬಾವುಟ ಹಿಡಿದು ಮುಷ್ಕರ ಮಾಡಿಸೋದೇ ಯೂನಿಯನ್ ಕೆಲ್ಸ ಅಂತ ಆಗಬಾರದು. ಕಾರ್ಮಿಕರೇ ಅವರ ಸಮಸ್ಯೆ ಅರಿತು ಹೋರಾಡಬೇಕು. ಅವರಿಗೆ ಸಂಬಳ ಕಡಿಮೆ ಇದೆ. 2500, 3000/–ದಲ್ಲಿ ಕಾರ್ಮಿಕರು ಇವತ್ತು ಹೇಗೆ ಜೀವನ ಸಾಗಿಸ್ತಾರೆ? ಅವರಿಗೆ collective bargaining ಬರ್ಬೇಕು. ಫ್ಯಾಕ್ಟರಿ ಇರಬೇಕು, ಆದರೆ ಶೋಷಣೆ ರಹಿತವಾಗಿ. ಅಂತಹದೊಂದು ತಂತ್ರವನ್ನು (ಸ್ಟ್ರಾಟಿಜಿ) ಯೂನಿಯನ್ ಇವತ್ತು ಬಳಸಬೇಕಾಗಿದೆ. ಕಾರ್ಖಾನೆಯ ಲಾಭ–ನಷ್ಟಗಳ ಬಗ್ಗೆ ಕಾರ್ಮಿಕರಿಗೆ ತಿಳಿಯುವಂತಹ ಒಂದು ವಾತಾವರಣ ಸೃಷ್ಟಿಸಬೇಕು. ಫ್ಯಾಕ್ಟರಿನಲ್ಲಿ ಹೆಣ್ಮಕ್ಕಳ ಮೇಲೆ ನಡೆಯೋ ಹಿಂಸೆಗೆ ಕೊನೆಯಾಗಬೇಕು.*
- ***ಯೂನಿಯನ್ ಬೇಡಿಕೆಗಳು***
  - *ಕನಿಷ್ಠ ವೇತನ ದಿನಕ್ಕೆ 200 ರೂ ಮಾಡಬೇಕು*
  - *ಕನಿಷ್ಠ ವೇತನದ ಕಮಿಟಿಯಲ್ಲಿ ಯೂನಿಯನ್‌ನವರು, ಹಾಗೂ ಕಾರ್ಮಿಕರು ಇರಬೇಕು.*
  - *ಇರುವ ಕಾನೂನುಗಳು ಪರಿಣಾಮಕಾರಿಯಾಗಿ ಜಾರಿಯಾಗಬೇಕು*
  - *ರಾತ್ರಿ ಪಾಳಿ ತರುವ ಮುಂಚೆ ಕಾರ್ಮಿಕರ ರಕ್ಷಣಾ ವಿಧಾನಗಳನ್ನು ಬಲಪಡಿಸಬೇಕು*
  - *ವಿಶೇಷ ಆರ್ಥಿಕ ವಲಯದಲ್ಲಿ ಗಾರ್ಮೆಂಟ್ ಕೈಗಾರಿಕೆ ತರಬಾರದು, ಇದರಿಂದ ಕಾರ್ಮಿಕರಿಗೆ ಅನ್ಯಾಯವಾಗುತ್ತದೆ.*
- *ಯಾವುದೇ ಸಂಘಟನೆಯಲ್ಲಿ ಒಳ–ಎಳೆದಾಟಗಳು ಇದ್ದೇ ಇರುತ್ವೆ. ಇದನ್ನ ಮೀರಿ ಬೆಳೀಬೇಕು. ಇವುಗಳನ್ನು ಸವಾಲಾಗಿ ತೆಗೆದುಕೊಳ್ಳಬೇಕು. ಸಂಘಟನೆಯಲ್ಲಿ ತಂತ್ರ ಇರಬೇಕೇ ಹೊರತು ಕುತಂತ್ರ ಮಾಡಬಾರದು. ನೇರ ನೇರವಾಗಿ ಇರಬೇಕು. ಈ ವಿಚಾರಗಳನ್ನು ಸಂಘಟನೇನಲ್ಲಿ ಹೇಳ್ತಾನೇ ಇರಬೇಕು. ಸಂಘಟನೆ ಮುಖ್ಯ ಹೊರತು, ವ್ಯಕ್ತಿಗಳಲ್ಲ.*
- *ಲೈಂಗಿಕ ದೌರ್ಜನ್ಯವನ್ನ ಕಾರ್ಮಿಕರು ಅರ್ಥಮಾಡಿಕೊಳ್ಳುವುದೇ ಬೇರೆ. ಕಿವಿ ಹಿಂಡಿದ್ರೆ, ತಲೆ ಮೇಲೆ ಹೊಡೆದ್ರೆ, ಭುಜ ಸವರಿದ್ರೆ, ಬೆನ್ನು ಸವರಿದ್ರೆ, ಟಚ್ ಮಾಡಿದ್ರೆ, ಸಹಿಸಿಕೊಳ್ತಾನೆ ಇರ್ತಾರೆ. ಅತ್ಯಾಚಾರ ನಡದ್ರೆ ಮಾತ್ರ ಲೈಂಗಿಕ ಕಿರುಕುಳ ಅಂತ ಅರ್ಥ. ಫೀಡಿಂಗ್ ಹೆಲ್ಪರ್ ಆಗಿ ಸುಂದರ ಹುಡುಗಿಯರನ್ನೇ ತೆಗೆದುಕೊಳ್ತಾರೆ. ಸುಂದರ ಹುಡುಗಿಯರು ಓಡಾಡಿಕೊಂಡು ಇವರಿಗೆ ಉತ್ಸಾಹ ತುಂಬ್ತಾ ಇರಬೇಕು. ಇಲ್ಲದಿದ್ದರೆ ಹಿಂಸೆ. ಹಳ್ಳಿಗಳಿಂದ ಬರೋ ಚಿಕ್ಕ ಚಿಕ್ಕ ಹೆಣ್ಣುಮಕ್ಕಳಿಗೆ ಒಳ್ಳೇ ಬಟ್ಟೆ ಹಾಕಿಕೊಂಡು ಓಡಾಡೋದೇ ರಾಜಯೋಗ, ಎಲ್ಲೋ ಕಳೆದು ಹೋಗಿ ಬಿಡ್ತಾರೆ. ಕಳೆದುಕೊಂಡ ಮೇಲೆ ಯೋಚನೆ ಮಾಡ್ತಾರೆ.*

  ಅದರಿಂದಲೇ ಕಾರ್ಮಿಕರಿಗೆ ಲೈಂಗಿಕ ಹಕ್ಕುಗಳ ಬಗ್ಗೆ ಮಾಹಿತಿ, ತಿಳಿವಳಿಕೆ ಹೆಚ್ಚು ಮಾಡಬೇಕಿದೆ.

ಭಾಗ – 3

ಮಹಿಳಾ ಕಾರ್ಮಿಕರ ಹೋರಾಟ ಕುರಿತು

ನವೆಂಬರ್ 1. 2004ರಲ್ಲಿ ಮುನ್ನಡೆ ಪ್ರಾರಂಭ ಆಯ್ತು. 1700 ಜನ ಸದಸ್ಯರು ಸಿ.ವಿ.ಡೆಪ್‌ನವರು ಹುಟ್ಟುಹಾಕಿದ್ದು. ಅವರು ತರಬೇತಿ ಕೊಡ್ತಾರೆ. ಅದರ ಖರ್ಚು ವೆಚ್ಚಗಳನ್ನು ಭರಿಸ್ತಾರೆ. 2011ರವರೆಗೆ ಮಾತ್ರ ಸಿ.ವಿ.ಡೆಪ್‌ನವರು ಬೆಂಬಲ ನೀಡ್ತಾರೆ. ನಂತರ ಅದು ಸ್ವತಂತ್ರವಾಗಿ ಕೆಲ್ಸ ಮಾಡಬೇಕು ಅನ್ನೋದು ಅವರ ಉದ್ದೇಶ.

ಮುನ್ನಡೆಯಿಂದಲೇ ಯೂನಿಯನ್ ಗಟ್ಟಿಯಾದದ್ದು. ಯೂನಿಯನ್ ಅಂದ್ರೆ ಕಾರ್ಮಿಕರಿಗೋಸ್ಕರ ಅನ್ನೋ ಭಾವನೆ ಬಂದಿದೆ. ಮುನ್ನಡೆಯಲ್ಲಿ ಸಾಮಾಜಿಕ ಸಮಸ್ಯೆಗಳು ಬಂದಾಗ ಪರಿಹರಿಸಬಹುದಿತ್ತು. ಅಂದರೆ, ಕಾರ್ಮಿಕರ ಸಮಸ್ಯೆಗೆ ಮುನ್ನಡೆಯಿಂದ ಒಂದು ಪತ್ರ ಬರೀಬಹುದಿತ್ತು ಅಷ್ಟೇ. ಮುನ್ನಡೆಯವರು ತರಬೇತಿಕೊಟ್ಟು ಕಾರ್ಮಿಕರಿಗೆ ಯೂನಿಯನ್ ಬೇಕೇ ಬೇಕು ಅಂತ ನಮ್ಮ ಮನಸ್ಸಿನಲ್ಲಿ ಹುಟ್ಟುಹಾಕಿದ್ರು. ಹಾಗಾಗಿ ಯೂನಿಯನ್‌ನಲ್ಲಿ ನಾವು ಗಟ್ಟಿ ಆದ್ವಿ. 10, 15 ಜನ ಕಾರ್ಮಿಕರು ಇರೋ ಕಡೆ ಒಂದು ಸ್ಥಳೀಯ ಕಮಿಟಿ ಅಂತ ಮಾಡಿಕೊಂಡು ಅವರಿಗೆ ತರಬೇತಿ ಕೊಡ್ತೀವಿ. ESI ಬಗ್ಗೆ, ration card, ಮಹಿಳೆಯರ ಹಕ್ಕು, PF, ನಿವೃತ್ತಿವೇತನ, ಆರೋಗ್ಯ ಸಮಸ್ಯೆ – ಹೀಗೆ ಅನೇಕ ಸಮಸ್ಯೆಗಳನ್ನು ನಾವು ಯೂನಿಯನ್‌ನಿಂದ ಎತ್ತಿಕೊಳ್ತೀವಿ. ಸಂಘಟನೆ ಮೂಲಕ ಸಮಸ್ಯೆ ಪರಿಹರಿಸೋಕೆ ಪ್ರಯತ್ನ ಪಡ್ತೀವಿ. ಫ್ಯಾಕ್ಟರಿ ಗೇಟ್ ಹತ್ರ ನಿಂತು ಕಾರ್ಮಿಕರಿಗೆ ಯೂನಿಯನ್ ಮಾಡಿಕೊಳ್ಳಿ ಅಂತ ಹೇಳ್ತೀವಿ. ಸದಸ್ಯರಾಗ್ತಾರೆ. ಫ್ಯಾಕ್ಟರಿ ಮುಚ್ಚಿ ಹೋದಾಗ PF ಹೇಗೆ ತೆಗೆದುಕೊಳ್ಳೋದು ಅಂತ ಅವ್ರಿಗೆ ಗೊತ್ತಿರೋಲ್ಲ, ಅದನ್ನ ಮಾಡಿಸಿಕೊಡ್ತೀವಿ. ಕೆಲಸದಿಂದ ತೆಗೆದುಹಾಕಿದ್ರೆ, ಕೌಟುಂಬಿಕ ಸಮಸ್ಯೆ, ಅವರ ಹಕ್ಕುಗಳ ಬಗ್ಗೆ ಮನೆಗೆ ಹೋಗಿ ಮಾತನಾಡ್‌ತೀವಿ. ಕಾನೂನುಗಳ ಬಗ್ಗೆ ಟ್ರೈನಿಂಗ್ ಕೊಡತೀವಿ. 22 ವರ್ಷ ಕಾರ್ಮಿಕರಾಗಿ ಕೆಲಸ ಮಾಡಿದಂತಹ ಜಯರಾಂರವರು ಯೂನಿಯನ್ ಉಪಾಧ್ಯಕ್ಷರು. ಸಿ.ವಿ.ಡೆಪ್‌ನ ಗೋಪಿ ಅವರು ಯೂನಿಯನ್‌ನ ಸಲಹೆಗಾರರಾಗಿದ್ದಾರೆ. ಪೀಣ್ಯಾ, ಮೈಸೂರು ರೋಡ್‌ನಲ್ಲಿ ಈಗ ಕಾರ್ಮಿಕರು ಬದಲಾಗ್ತಾ ಇದಾರೆ. 25,000 ಕಾರ್ಮಿಕರು ಟ್ರೈನಿಂಗ್ ತೆಗೆದುಕೊಂಡಿದ್ದಾರೆ. ಮುನ್ನಡೆ, ಯೂನಿಯನ್ ಇದೆ ಅಂತ ಧೈರ್ಯ ಅವರಿಗೆ. ಗಾರ್ಮೆಂಟ್ಸ್‌ನಲ್ಲಿ 5ಲಕ್ಷ ಕಾರ್ಮಿಕರು ಇದ್ದಾರೆ. ಬೇರೆ ಬೇರೆ ಯೂನಿಯನ್‌ಗಳೂ ಇವೆ. ಕಾರ್ಮಿಕರಿಗೆ ಎಲ್ಲಿ ನ್ಯಾಯ ಸಿಗುತ್ತೋ ಅಲ್ಲಿ ಹೋಗ್ತಾರೆ. ಇದರ ಬಗ್ಗೆ ನಾವು ವಿಶಾಲವಾಗಿ ಯೋಚಿಸಬೇಕು. ಎಲ್ಲ ಒಬ್ಬರೇ – ಒಂದು ಸಂಸ್ಥೆಯೇ ಮಾಡೋಕೇ ಆಗೋಲ್ಲ. ❑



ಈ ಹಿಂಸೆಯನ್ನು ಹೇಗೆ ವ್ಯಾಖ್ಯಾನಿಸುವುದು?

● ವಿಜು

ಮಹಿಳೆ ಸಮಾಜದ ಒಂದು ಕಣ್ಣು. ಆಕೆಯ ಮೇಲೆ ಹಲವಾರು ಜವಾಬ್ದಾರಿಗಳು. ಆಕೆ ತನ್ನ ಹೆಗಲ ಮೇಲಿರುವ ಎಲ್ಲಾ ಜವಾಬ್ದಾರಿಗಳನ್ನು ಸೂಕ್ತವಾಗಿ ನಿಭಾಯಿಸಿಕೊಂಡು ಹೋದರೂ ಆಕೆಗೆ ಸಲ್ಲಬೇಕಾದ ಗೌರವ, ಬೆಲೆ ಸಲ್ಲುತ್ತಿಲ್ಲ. ಮಧ್ಯಮ ವರ್ಗದ ಮಹಿಳೆಯರು ತಮ್ಮ ಎದೆಯೊಳಗಿನ ನೋವನ್ನು ಹೇಳಿಕೊಳ್ಳಲಾರದೆ ನಾಲ್ಕುಗೋಡೆಗಳಿಗೆ ಹುದುಗಿಸಿ ಕೊಂಡಿರುತ್ತಾರೆ. ಮಾನಸಿಕವಾಗಿ, ದೈಹಿಕವಾಗಿ ತಮ್ಮೊಳಗೇ ಕೊರಗುತ್ತಾ ಸೊರಗುತ್ತಾರೆ. ಈಕೆ ತನ್ನ ಸಮಸ್ಯೆಯಿಂದ ಹೊರಬರಬೇಕಾದರೆ ಅವಳಿಗಿರುವ ದಾರಿಯೆಂದರೆ ವಿದ್ಯಾಭ್ಯಾಸ ಹಾಗೂ ಆರ್ಥಿಕ ಸ್ವಾವಲಂಬನೆ.

ಅಮ್ಮನ ಲಾಲನೆ ಪಾಲನೆಯಲ್ಲಿ ಮುದ್ದಿನಿಂದ ಬೆಳೆದವಳು ಸರಳ. ಇಬ್ಬರು ಹೆಣ್ಣು ಮಕ್ಕಳು ಹಾಗೂ ಒಬ್ಬ ಮಗ, ಹೀಗೆ ಅವರದು ಸಣ್ಣ ಕುಟುಂಬ. ಅವರ ತಂದೆ ಸಂಜೆಯಾದರೆ ಕುಡಿದು ತೂರಾಡುತ್ತಾ ಮನೆಗೆ ಬರುತ್ತಿದ್ದರು. ಅದು ಅವರ ಮಕ್ಕಳ ಮೇಲೆ ತೀವ್ರವಾದ ಪರಿಣಾಮವನ್ನು ಉಂಟುಮಾಡುತ್ತಿತ್ತು.

ಸರಳಳನ್ನೂ ಎಲ್ಲಾ ಹೆಣ್ಣುಮಕ್ಕಳನ್ನೂ ತಾಯಂದಿರು ಕಟ್ಟುನಿಟ್ಟಿನಿಂದ ಬೆಳೆಸುವಂತೆ ಬೆಳೆಸಿದರು. ಆಕೆ ಹೈಸ್ಕೂಲಿಗೆ ಹೋಗುತ್ತಿರುವಾಗ ಅವರ ತಾಯಿ ಮಗಳನ್ನು ಕರೆದುಕೊಂಡು ಹೋಗುವುದು, ವಾಪಸ್ ಬರುವಾಗ ಮಗಳನ್ನು ಕರೆದುಕೊಂಡು ಬರುವುದು ಮಾಡುತ್ತಿದ್ದರು. ಶಾಲೆಯಿಂದ ಮನೆಗೆ ಬಂದ ನಂತರ ಯಾವ ಕಾರಣಕ್ಕೂ ಹೊರಗೆ ಹೋಗುವಂತಿರಲಿಲ್ಲ. ಈ ಕಟ್ಟಳೆಗಳು ಕೇವಲ ಹೆಣ್ಣುಮಕ್ಕಳಿಗೆ ಮಾತ್ರ. ಮಗನನ್ನು ಬೆಳೆಸುವ ವಿಧಾನ ಮಾತ್ರ ಬೇರೆಯಾಗಿತ್ತು. ಅವನು ಕೇಳಿದ್ದನ್ನೆಲ್ಲ ಕೊಡಿಸುತ್ತ, ಯಾವುದೇ ಕಟ್ಟಳೆಗಳಿಲ್ಲದೆ ಆತನನ್ನು ಮುದ್ದಿನಿಂದ ಬೆಳೆಸಿದರು. ಸರಳಾರವರ ಅಮ್ಮ ಮಕ್ಕಳನ್ನು ಬೆಳೆಸುವ ವಿಧಾನವನ್ನು ಅಕ್ಕಪಕ್ಕದ ಮನೆಯವರು ಮೆಚ್ಚಿ ಹೊಗಳುತ್ತಿದ್ದರು. ಆದರೆ ನಾಲ್ಕು ಗೋಡೆಯ ಒಳಗೆ ಮಕ್ಕಳನ್ನು ಕೂಡಿಹಾಕಿ ಪ್ರಪಂಚಜ್ಞಾನವಿಲ್ಲದಂತೆ ಬೆಳೆಸುವುದರಿಂದ ಮುಂದೆ ತನ್ನ ಮಕ್ಕಳಿಗೆ ಮುಳುವಾಗಬಹುದೆಂಬ ಕಿಂಚಿತ್ ಯೋಚನೆಯೂ ಆಕೆಗಿರಲಿಲ್ಲ.

ಸರಳ ಎಸ್.ಎಸ್.ಎಲ್.ಸಿ.ಯಲ್ಲಿ ಫೇಲಾದಳು. ಇದೇ ಇವಳ ಬಾಳಿಗೆ ಕತ್ತಲಿನ ಪುಟವಾಯಿತು. ಆದರೆ ಆಕೆ ದಡ್ಡಿಯೇನಲ್ಲ. ಆಕೆ ಪುನಃ ಕಟ್ಟಿ ಪಾಸು ಮಾಡಬಹುದಿತ್ತು. ತಾಯಿ ಪುನಃ ಪರೀಕ್ಷೆ ಕಟ್ಟು ಎಂದು ಒತ್ತಾಯಿಸಲಿಲ್ಲ. ಬದಲಾಗಿ ಮನೆಕೆಲಸ ಮಾಡಿಕೊಂಡಿರಲು ಹೇಳಿದಳು. ಸರಳ ಹಠಮಾಡಲಿಲ್ಲ. ಒಬ್ಬನೇ ಮಗನನ್ನು ಚೆನ್ನಾಗಿ ಓದಲಿ ಎಂದು ಟ್ಯೂಷನ್‌ಗೆ ಕಳಿಸುತ್ತಿದ್ದರು. ಕೆಲವೊಮ್ಮೆ ಅವರ ತಾಯಿಯೇ ಕುಳಿತು ಓದಿಸುತ್ತಿದ್ದರು. ಸುಂದರವಾದ ಮುಗ್ಧ ಹುಡುಗಿ ಸರಳ, ತುಂಬಾ ಎತ್ತರದ ನಿಲುವುಳ್ಳವಳು. ಆಕೆ ಎಲ್ಲೂ ಹೊರಗೆ ಹೋಗಲು ಮನೆಯಲ್ಲಿದ್ದ ಅಜ್ಜಿ, ಅಪ್ಪ, ತಮ್ಮ, ಚಿಕ್ಕಪ್ಪ, ಕಡಿವಾಣ ಹಾಕುತ್ತಿದ್ದರು. ಚಿತ್ರಕಲೆ, ಕಸೂತಿಯನ್ನು ಹಾಕುವುದರಲ್ಲಿ ಆಕೆಗೆ ಆಸಕ್ತಿ ಇತ್ತು. ಆದರೆ ಹೊರಗೆ ಹೋಗಿ ಕಲಿಯುವ ಅವಕಾಶ ಅವಳಿಗಿರಲಿಲ್ಲ. ನಿಧಾನವಾಗಿ ಆಕೆಯ ಮದುವೆಯ ಪ್ರಸ್ತಾಪ ನಡೆಯತೊಡಗಿತು.

ತಂದೆ ಕುಡಿದುಬಂದು ಮನೆಯಲ್ಲಿ ರೇಗುವುದು, ವಿನಾಕಾರಣ ಎಲ್ಲರನ್ನೂ ಬೈಯುವುದು ನಡದೇ ಇತ್ತು. ದೊಡ್ಡಮಗಳಿಗೆ ಮದುವೆಮಾಡಿ ಜವಾಬ್ದಾರಿಯನ್ನು ಕಳೆದುಕೊಳ್ಳುವ ಆತುರ ತಾಯಿಗೆ. ದಳ್ಳಾಳಿಯ ಮೂಲಕ ಬಂದ ಸಂಬಂಧ ಒಳ್ಳೆಯದೆಂದು ಎಲ್ಲರೂ ಒಪ್ಪಿದರು. ಆತನ ಶ್ರೀಮಂತಿಕೆ, ಸ್ವಂತ ಮನೆ, ಒಳ್ಳೆಯ ಕೆಲಸ ಇವುಗಳ ಮುಂದೆ ಅವರ ಗುಣ, ಸ್ವಭಾವ ಮುಂತಾದವು ಪ್ರಮುಖವಾಗಲೇ ಇಲ್ಲ. ಹುಡುಗಿಯು ಸುಂದರಳಾದ್ದರಿಂದ ಹುಡುಗನ ಮನೆಯವರು ಒಪ್ಪಿದರು. ವರದಕ್ಷಿಣೆಯ ಮಾತುಕತೆ ಮುಗಿದು ಹುಡುಗಿಗೆ ಬಳೆಗಳು, ಕತ್ತಿಗೆ ಚಿನ್ನದ ಸರ, ಅವಳ ಹೆಸರಿನಲ್ಲಿ 50,000/- ಹಣವನ್ನು ಠೇವಣಿ ಇಡುವುದು ಒಪ್ಪಿಗೆಗೆ ಮೊದಲು ಎಲ್ಲವೂ ಮಾತುಕತೆಯಲ್ಲಿ ತೀರ್ಮಾನವಾಯಿತು. ಹುಡುಗನ ಶ್ರೀಮಂತಿಕೆಗೆ ತಕ್ಕ ಹಾಗೆ ಆಡಂಬರವಾಗಿ ಮದುವೆ ಮಾಡಿಸಿಕೊಟ್ಟರು. ಮದುವೆಯ ಖರ್ಚುವೆಚ್ಚಕ್ಕಾಗಿ ತಂದೆ ತಮ್ಮ ಹೆಸರಿನಲ್ಲಿದ್ದ ಒಂದು ಮನೆಯನ್ನು ಮಾರಿದರು. ಗಂಡಿನವರು ಹೇಳಿದ ಹಾಗೆ ಊಟ ತಿಂಡಿ ವ್ಯವಸ್ಥೆಯನ್ನೂ ಮಾಡಿದ್ದರು. ಮದುವೆಯ ಸಂದರ್ಭದಲ್ಲೇ ಅತ್ತೆಯಾದವಳು ತನ್ನ ವರಸೆಯನ್ನು ತೋರಿಸ ತೊಡಗಿದ್ದಳು.

ಮದುಮಗಳಾದ ಸರಳಳ ಸಂಭ್ರಮ ಗರಿಗೆದರಿತ್ತು. ಆಕೆ ಬಣ್ಣ ಬಣ್ಣದ ಕನಸುಗಳ ಲೋಕದಲ್ಲಿ ಕಳೆದು ಹೋಗಿದ್ದಳು. ಮದುವೆಯ ಹಿಂದಿನ ದಿನ ಅವರ ಮನೆಯಲ್ಲಿ ಚಪ್ಪರ ಹಾಕುವುದು, ಮದುಮಗಳಿಗೆ ಅರಿಶಿಣನೀರು ಹಾಕಿ ಕೈ ತುಂಬಾ ಹಸಿರುಬಳೆಗಳನ್ನು ತೊಡಿಸಿದ್ದು, ಕೈತುಂಬಾ ಅಂದವಾಗಿ ಮೆಹಂದಿ ಹಾಕಿಸಿಕೊಡಿದ್ದು, ಆಕೆ ಯಾವುದೋ ಲೋಕದಿಂದ ಬಂದ ಅಪ್ಸರೆಯಂತಿದ್ದಳು. ಇಂತಹ ಮುಗ್ಧ ಅಪ್ಸರೆಯ ಕೊರಳನ್ನು ಕಟುಕನೊಬ್ಬನಿಗೆ ನೀಡುತ್ತಿದ್ದೇವೆಂಬ ಅರಿವು ಯಾರಿಗೂ ಇರಲಿಲ್ಲ. ಮದುವೆ ಆದ ನಂತರ ಗಂಡಿನ ಮನೆಯವರು ಸಂಭ್ರಮದಿಂದ ಸೊಸೆಯನ್ನು ಮನೆ ತುಂಬಿಸಿಕೊಂಡರು. ದೊಡ್ಡ ಶ್ರೀಮಂತರ ಮನೆಯನ್ನು ಸೇರುವ ಸಂಭ್ರಮ. ಗಂಡನ ಮುಗ್ಧಮುಖ ನೋಡಿ ಸಾವಿರಾರು ಕನಸು ಗಳೊಂದಿಗೆ ನಾಚಿಕೆಯಿಂದ ಮಾತನ್ನೇ ಮರೆತಿದ್ದಳು ಸರಳ.

ಆದರೆ ಇವಳ ಸಂಭ್ರಮ ಮಂಜಿನಂತೆ ಕರಗಲು ಪ್ರಾರಂಭವಾಯಿತು. ಇವಳು ಗಂಡನ ಮನೆಗೆ ಕಾಲಿಡುತ್ತಿದ್ದ ಹಾಗೆ ಮನೆಕೆಲಸದವಳನ್ನು ಬಿಡಿಸಿದರು. ಬೆಳಿಗ್ಗೆ ಎದ್ದು ಬಾಗಿಲು ಗುಡಿಸಿ ನೀರು ಹಾಕುವುದರಿಂದ ಹಿಡಿದು ಸಂಜೆ ಎಲ್ಲರ ಊಟವಾದ ನಂತರ ಪಾತ್ರೆ ತೊಳೆಯುವವರೆಗೆ ಬಿಡುವಿಲ್ಲದ ದುಡಿತ. ಆರೋಗ್ಯವಾಗಿ ಸುಂದರವಾಗಿದ್ದ ಸರಳಾ ಕೃಷವಾಗಿ ಬಿಳಿಚಿಕೊಳ್ಳ ತೊಡಗಿದಳು. ತಂದೆ ತಾಯಿಗೆ ಫೋನ್ ಮಾಡುವ ಹಾಗಿರಲಿಲ್ಲ. ಅತ್ತೆ ಫೋನ್ ಮಾಡಲು ಬಿಡುತ್ತಿರಲಿಲ್ಲ. ಗಂಡನೆಂಬ ಪ್ರಾಣಿಗೆ ತಾಯಿಯ ಮಾತೇ ವೇದವಾಕ್ಯ. ಯಾರಿಗೂ ಗೊತ್ತಾಗದ ಹಾಗೆ ಕಾಯಿನ್ ಬೂತ್‌ನಲ್ಲಿ ಸರಳಾ ಫೋನ್ ಮಾಡಬೇಕಿತ್ತು.

ತಾಯಿ, ಮಗಳನ್ನು ನೋಡಲು ಮನೆಗೆ ಹೋದರೆ ತಾಯಿ-ಮಗಳು ಕುಳಿತು ಮಾತಾಡುವಂತಿರಲಿಲ್ಲ. ಅವಳು

ತಾಯಿಯನ್ನು ನೋಡಿ ನಕ್ಕು ಕಾಫಿಕೊಟ್ಟು, ನಂತರ ಪರಿಚಯ ವಿಲ್ಲವೇನೋ ಅನ್ನುವ ರೀತಿಯಲ್ಲಿ ಅವಳ ಕೆಲಸ ಅವಳು ಮಾಡ ಬೇಕಾಗಿತ್ತು. ಇದನ್ನು ನೋಡಿ ತಾಯಿಯ ಕರುಳಿಗೆ ಬೆಂಕಿ ಇಟ್ಟ ಹಾಗೆ ಆಯ್ತು. ಹೀಗೇಕೆಂದು ಕೇಳಿದ ಕೂಡಲೇ ಬೀಗತಿ ಜೋರಾಗಿ ಜಗಳ ಮಾಡಿ 'ಬೇಕಾದರೆ ನಿಮ್ಮ ಮಗಳನ್ನು ಇಲ್ಲಿ ಬಿಟ್ಟು ಹೋಗಿ, ಇಲ್ಲವಾದರೆ ನಿಮ್ಮ ಮನೆಗೆ ಕರೆದುಕೊಂಡುಹೋಗಿ ಮುದ್ದು ಮಾಡಿರಿ. ನನ್ನ ಮಗನಿಗೆ ಬೇರೆ ಮದುವೆ ಮಾಡ್ತೀವಿ' ಎಂದ್ಲು. ಈ ಮಾತು ಕೇಳಿ ತಬ್ಬಿಬ್ಬಾಗಿ ಏನೂ ಮಾತಾಡದೆ ಮಗಳ ಸಂಕಟವನ್ನು ನೋಡಲಾರದೆ ತಾಯಿ ದುಃಖದಿಂದ ಒದ್ದಾಡಿಕೊಂಡು ವಾಪಸ್ ಬಂದರು.

ಹಾಗೂ ಹೀಗೂ ಒಂದು ವರ್ಷ ಕಳೆಯಿತು. ಸರಳಳನ್ನು ತವರು ಮನೆಗೆ ಕಳಿಸಲೇ ಇಲ್ಲ. ಮಗಳನ್ನು ಇಂತಹ ಮನೆಗೆ ಕೊಟ್ಟು ಮಾಡಿದೆವಾ? ದುಡುಕಿದ್ದಾಯಿತೆ? ಎಂದು ಹಲವಾರು ಬಾರಿ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಾ ಒಳಗೊಳಗೇ ಕೊರಗ ತೊಡಗಿದರು. ಸರಳಾಳ ಬದುಕು ದಿನಕಳೆದಂತೆ ಬೆಂಕಿಯಲ್ಲಿ ಬೆಂದಹಾಗಿರುತ್ತಿತ್ತು.

ಒಂದು ವರುಷವಾದರೂ ಮಕ್ಕಳಾಗಲಿಲ್ಲವೆಂಬ ಅತ್ತೆಯ ಕಾಟ ಸಹ ಪ್ರಾರಂಭವಾಯಿತು. ಆದರೆ, ಎರಡು ವರ್ಷಗಳ ನಂತರ ಸರಳಾ ಗರ್ಭಿಣಿಯಾದಳು. ಈ ಸಂತೋಷವನ್ನು ಆಕೆ ತನ್ನ ತಂದೆ ತಾಯಿಯ ಜೊತೆಗೆ ಹಂಚಿಕೊಳ್ಳಲೂ ಬಿಡಲಿಲ್ಲ. ಸರಿಯಾದ ಆಹಾರವಿರಲಿಲ್ಲ. ಮನೆಕೆಲಸದ ಸಂಪೂರ್ಣ ಹೊರೆ ಅವಳ ಮೇಲಿತ್ತು. ಮನೆಯಲ್ಲಿ ಎಲ್ಲರ ಸೇವೆಯನ್ನೂ ಮಾಡುವುದರ ಜೊತೆಗೆ ಬಟ್ಟೆ ಪಾತ್ರೆ ತೊಳೆಯುವ ಎಲ್ಲಾ ಕೆಲಸಗಳನ್ನೂ ಆಕೆಯೇ ಮಾಡಬೇಕಿತ್ತು. ತನ್ನ ಕೆಲಸ ಮಾಡಿಕೊಳ್ಳಲು ಆಕೆಗೆ ಆಗುತ್ತಿರಲಿಲ್ಲ. ಆಕೆಯ ಗಂಡನೆಂಬ ಪ್ರಾಣಿ ಕರುಣೆಯಿಲ್ಲದಂತೆ ವರ್ತಿಸುತ್ತಿದ್ದ. ಒಂದು ದಿನವೂ ಊಟ ಮಾಡಿದೆಯಾ, ಚೆನ್ನಾಗಿ ನಿದ್ದೆ ಮಾಡು, ವಿಶ್ರಾಂತಿ ತೆಗೆದುಕೋ ಎಂದು ಸೌಜನ್ಯಕ್ಕೂ ಎರಡು ಮಾತು ಹೇಳಿದವನಲ್ಲ. ಅತ್ತೆಯಂತೂ ಕೇಳಲೇಬೇಡಿ. ಇಂತಹ ಅಮಾನುಷ ವಾತಾವರಣದಲ್ಲಿ ನೋವಿನಿಂದ ನಲುಗುತ್ತಿದ್ದ ಸರಳಾಗೆ ಮುಂದಿನ ದಿನಗಳು ಹೇಗಪ್ಪಾ ಎಂಬ ಚಿಂತೆಯೂ ಹೊಟ್ಟೆಯಲ್ಲಿ ಮಗುವಿನೊಂದಿಗೆ ಬೆಳೆಯುತ್ತಲೇ ಇತ್ತು.

ಮಗಳು ಗರ್ಭಿಣಿಯೆಂದು ತಿಳಿದ ತಾಯಿ ಮಡಿಲು ತುಂಬಾ ಬಗೆಬಗೆ ತಿಂಡಿಗಳನ್ನು ಮಾಡಿಕೊಂಡು ಮಗಳನ್ನು ಮಾತನಾಡಿಸಿಕೊಂಡು ಎರಡು ದಿನ ತವರು ಮನೆಗೆ ಕರೆದುಕೊಂಡು ಹೋಗಲು ಬಂದರು. ಸಾವಿರ ಆಸೆಯನ್ನು ಹೊತ್ತು ಬಂದ ಆ ತಾಯಿ ಕಂಡ ಪರಿಸ್ಥಿತಿಯೇ ಬೇರೆ ಇತ್ತು. ಹುಡುಗಿಯ ಅತ್ತೆ ಸರಿಯಾಗಿ ಮಾತನಾಡಿಸಲೇ ಇಲ್ಲ. ಮಗಳಂತೂ ಸೋತು ಹೋಗಿದ್ದಳು. ತವರು ಮನೆಗೆ ಕಳಿಸಿ ಕೊಡಲು ಅತ್ತೆ ಒಪ್ಪಲೇ ಇಲ್ಲ. ಇಷ್ಟು ದಿನ ನೋವನ್ನು ಸಹಿಸಿದ್ದ ತಾಯಿ ಅನಿವಾರ್ಯವಾಗಿ ಬೀಗರೊಂದಿಗೆ ಜಗಳವಾಡಿಕೊಂಡು ಬರಿಗೈಯಲ್ಲಿ ವಾಪಸ್ಸಾದರು.

ದುಃಖತಪ್ತಳಾದ ತಾಯಿ ಹೆಚ್ಚು ದಿನ ಬದುಕಲೇ ಇಲ್ಲ. ಆಕೆಗೆ ಹೃದಯಸ್ತಂಭನವಾಯ್ತು. ವಿಷಯ ತಿಳಿದಿದ್ದರೂ ಸರಳಳನ್ನು ತವರು ಮನೆಗೆ ಕಳಿಸಲಿಲ್ಲ. ಮರುದಿನ ಕಳಿಸುವ ವೇಳೆಗೆ ತಾಯಿ ಮರಣ ಹೊಂದಿದ್ದರು. ಸರಳಾ ಒಂದೆರಡು ದಿನ ಮಾತ್ರ ತಾಯಿಯ ಮನೆಯಲ್ಲಿದ್ದಳು. ತಾಯಿಯ ಸಾವಿನಿಂದ ಸರಳಾ ತತ್ತರಿಸಿ ಹೋದಳು. ಹೊಟ್ಟೆಯಲ್ಲಿರುವ ಕಂದನ ಬಗ್ಗೆ ಕಾಳಜಿ ಕಡಿಮೆಯಾಯಿತು. ತನ್ನ ಬಾಣಂತನ ಮಾಡುವವರು ಯಾರು? ಯಾರು ತನ್ನನ್ನು ನೋಡಿಕೊಳ್ಳುವವರು ಎಂಬ ಚಿಂತೆ ಆಕೆಯನ್ನು ಕಿತ್ತು ತಿನ್ನುತ್ತಿತ್ತು.

ಎಂಟು ತಿಂಗಳ ನಂತರ ಆಕೆಯನ್ನು ತವರು ಮನೆಗೆ ಕಳಿಸಿದರು. ಆಕೆಗೆ ಸದಾ ತಾಯಿಯ ನೆನಪು. ಆಕೆಗೆ ಹೆಣ್ಣುಮಗುವಾದ ವಿಷಯವನ್ನು ತಿಳಿದ ಗಂಡನ ಮನೆಯವರು ಸಂಪೂರ್ಣವಾಗಿ ಆಕೆಯನ್ನು ನಿರ್ಲಕ್ಷಿಸಿದರು. ಆಕೆಯ ಗಂಡನ ಮನೆಯವರಿಗೆ ವಿಷಯವನ್ನು ತಿಳಿಸಲೂ ಹೆದರಿದ ಆಕೆ ಅವರು ಏನು ಬೈಯುತ್ತಾರೋ ಹೇಗೆ ಅವರನ್ನು ಎದುರಿಸುವುದು? ಅವರಿಗೆ ಗಂಡುಮಗು ಬೇಕಿತ್ತು ಎಂದು ಕೊರಗತೊಡಗಿದಳು. ತಾಯ್ತನದ ಸಂತೋಷ, ಆನಂದ ಆಕೆಯ ಪಾಲಿಗಿರಲಿಲ್ಲ. ಸದಾ ಕಣ್ಣೀರು. ಹೆಣ್ಣುಮಗು ತನಗೆ ಇಷ್ಟವಿಲ್ಲ, ತಾನು ನೋಡಲು ಬರುವುದಿಲ್ಲವೆಂದು ಪತಿ ಮಹಾಶಯ ಫೋನಿನಲ್ಲೇ ತಿಳಿಸಿದ. ಒಂದು ವರ್ಷ ನಾಲ್ಕು ತಿಂಗಳಾದರೂ ಸೊಸೆಯನ್ನು ಕರೆದುಕೊಂಡು ಹೋಗುವ ವಿಷಯವನ್ನು ಬೀಗರು ಎತ್ತಲೇ ಇಲ್ಲ. ಹೀಗೇ ಬಿಟ್ರೆ ಹೇಗೆ ಎಂದು ತಂದೆ ಒಂದು ದಿನ ಬೀಗರಿಗೆ ಫೋನ್ ಮಾಡಿ ಸೊಸೆಯನ್ನು ಯಾವಾಗ ಕರೆದುಕೊಂಡು ಹೋಗ್ತೀರಿ ಎಂದು ಕೇಳಿದಾಗ. ಇನ್ನು ಒಂದು ತಿಂಗಳಲ್ಲಿ ಅದ್ದೂರಿಯಾಗಿ ನಾಮಕರಣ ಮಾಡಿಕೊಡಿ, ನಂತರ ಕರೆದುಕೊಂಡು ಹೋಗುತ್ತೇವೆಂದಿದ್ದರು. ಅದರಂತೆ ಸುಮಾರು 70,000/ರೂ. ಖರ್ಚು ಮಾಡಿ ತಂದೆ ಮಗುವಿನ ನಾಮಕರಣ ಮಾಡಿ ಮಗಳನ್ನು ಕಳುಹಿಸಿ ಕೊಟ್ಟರು.

ಈ ನಡುವೆ ಸರಳಾಳ ಬದುಕು ಗಾಣದೆತ್ತಿನಂತೆ ನಡೆಯುತ್ತಿತ್ತು. ಮನೆಯ ಕೆಲಸದ ನಡುವೆ ಮಗುವನ್ನು ಸರಿಯಾಗಿ ನೋಡಿಕೊಳ್ಳಲು ಆಗುತ್ತಿರಲಿಲ್ಲ. ಮಗುವಿಗೆ ಬೇಕಾದ ವಸ್ತುಗಳಿಗೆ ಗಂಡನ ಬಳಿ ಹಣ ಕೇಳಿದರೂ ಕೊಡುತ್ತಿರಲಿಲ್ಲ. ಹೇಳಲೂ ಆಗದೆ, ಅನುಭವಿಸಲೂ ಆಗದೆ, ಸರಳಾ ಒಳೊಗೊಳಗೆ ನೊಂದು ನಲುಗಿಹೋಗಿದ್ದಳು. ಈ ನಡುವೆ ತಂದೆಯ ಸಾವು ಆಕೆಯನ್ನು ಆಘಾತಗೊಳಿಸಿತ್ತು. ಸರಳಾ ತಂದೆ ತಾಯಿ ಇಬ್ಬರನ್ನೂ ಕಳೆದುಕೊಂಡು ಒಂಟಿಯಾಗಿದ್ದಾಳೆ.

ಕುಟುಂಬದ ನಾಲ್ಕು ಗೋಡೆಯ ಒಳಗೆ ನಡೆಯುವ ಈ ಹಿಂಸೆಯನ್ನು ಯಾವ ಮಾತುಗಳಲ್ಲಿ ಹಿಡಿಯಬೇಕು? ಹೇಗೆಂದು ವ್ಯಾಖ್ಯಾನಿಸಬೇಕು? ಸರಳಳಂತಹ ಹೆಣ್ಣುಮಕ್ಕಳಿಗೆ ಜೀವಂತವಾಗಿ ಉಸಿರಾಡುವ ದಾರಿ ಯಾವುದು? ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಹಾಗೂ ಸ್ವಾವಲಂಬಿ ಬದುಕನ್ನು ಬಾಲ್ಯದಿಂದಲೇ ನಿರಾಕರಿಸಿ, ಮದುವೆಯೇ ಜೀವನದ ಪರಮೋದ್ದೇಶವೆಂದ ಮೇಲೆ ಅವಳಿಗುಳಿದಿರುವ ಆಯ್ಕೆ ಏನು? ಇದು ಹೆಣ್ಣು ಹೆತ್ತವರು, ಹಾಗೂ ಹೆಣ್ಣುಮಕ್ಕಳು ಗಂಭೀರವಾಗಿ ಯೋಚಿಸಬೇಕಾದ ಸಂಗತಿ.

❑

ನನ್ನ ಪಾಲಿಗಿದ್ದ ಮುಖ್ಯ ಕೊರತೆ ಪ್ರೀತಿಯದು. ಪ್ರೀತಿ ವಾತ್ಸಲ್ಯ ಎಂಬುದು ನನ್ನ ತಾಯಿಯಿಂದಲೇ ನನಗೆ ಲಭಿಸಲಿಲ್ಲ. ಕರುಣೆ ಅನುಕಂಪವೆಂಬುದನ್ನು ನೋಡಲು ಅಸಂಸ್ಕೃತರಂತಿದ್ದ ಪದ್ದಮ್ಮನೇ ತುಂಬಿಕೊಟ್ಟಿದ್ದರು. ಒಂದು ಕಾಲು ಸ್ವಲ್ಪ ಊನವಾಗಿ ಹುಟ್ಟಿದ್ದು ನನ್ನದೇ ಅಪರಾಧ ಎಂದು ಅಮ್ಮ ಭಾವಿಸಿದಂತಿತ್ತು. ತಾಯಿಯ ಮಮತೆಯ ಬಗ್ಗೆ ಸಾವಿರಾರು ಕಥೆ ಕಾದಂಬರಿಗಳಿವೆ, ಗಾದೆ-ಉಕ್ತಿಗಳಿವೆ. ಆದರೆ ನನ್ನಂಥ ನತದೃಷ್ಟೆಯ ಪಾಲಿಗೆ ಆ ಪುಣ್ಯವಿರಲಿಲ್ಲ..."

–ಎಂ. ಕೆ. ಇಂದಿರಾ (ಹಸಿವು. ಪು.-೨೪)

ಹೊನ್ನಿನ ಹಂದರದಲ್ಲಿ
ಸುಂದರ ಕರ್ನಾಟಕ

ಕರುನಾಡ ಸಿರಿನುಡಿ-ಕನ್ನಡ
ಕಸ್ತೂರಿ ಪರಿಮಳದ ಕುಡಿ-ಕನ್ನಡ ನುಡಿ
ಹಾಲ್ಜೇನಿನ ಮಧುರ ಝರಿ-ಕನ್ನಡ ನಾಣ್ಣುಡಿ

ಸುಮಾರು 2000 ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ, ಸಾಹಿತ್ಯ ಅನನ್ಯ ಮತ್ತು ಅನುಕರಣೀಯ. ಇಂದು ಕೂಡ ಕರ್ನಾಟಕ ಸಮಗ್ರ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಆಟೋಮೊಬೈಲ್ ಉದ್ಯಮ, ಸಿದ್ಧ ಉಡುಪು, ಆಭರಣಗಳು, ಕ್ರೀಡೆ, ಪುಷ್ಪೋದ್ಯಮದಂತಹ ಪ್ರಮುಖ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿಯೂ ಶ್ಲಾಘನೀಯ, ಕರ್ನಾಟಕ ಭಾರತಕ್ಕಷ್ಟೇ ಮಾತ್ರವಲ್ಲ ಇಡೀ ವಿಶ್ವಕ್ಕೆ ಮಾದರಿ.

ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯನಾಡಿಗೆ ಸುವರ್ಣ ಸಂಭ್ರಮ

ಕರ್ನಾಟಕ ವಾರ್ತೆ

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2007-09

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ–ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ಣಿನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine

Posted on 9th of every month at Chamarajpet Post Office

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು – 560 018